ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

---

ಸಂಖ್ಯೆ:. ಸಿ4(6) ಶೈ.ವ.ಪ್ರಾ-01/2022-23. ದಿನಾಂಕ: 20/04/2022

## ಸುತ್ತೋಲೆ

ವಿಷಯ: ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ 2022-23 ನೇ ಸಾಲಿನ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಕ್ರಿಯಾ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಎಡಿಎಂ2(1)ಶೈ.ವ.ನಿ/02/2021-22 ದಿನಾಂಕ: 23/02/2022

2. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇಲ್ಲಿನ ಸುತ್ತೋಲೆ ಪತ್ರ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇವಿಜಿ/2022-23/ಅ.ಹಾ/32/2021-22 ದಿನಾಂಕ: 04/03/2022.

******

ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಶೈಕ್ಷಣಿಕ ಚಟುವಟಿಕೆಗಳನ್ನು ಅವಲೋಕಿಸಿದಂತೆ, ಈ ಹಿಂದೆ ಕೋವಿಡ್-19 ರ ಪ್ರತಿಕೂಲ ಸನ್ನಿವೇಶದ ಹಿನ್ನಲೆಯಲ್ಲಿ ಶಾಲೆಗಳಿಗೆ ಅನಿವಾರ್ಯವಾಗಿ ಫೆಬ್ರವರಿ 2020-21 ರಿಂದ ರಜೆ ನೀಡುವ ಸಂದರ್ಭ ಒದಗಿ ಬಂದಿದ್ದು, ಮಕ್ಕಳ ಕಲಿಕಾ ನಿರಂತರತೆಗೆ 2019-20, 2020-21, ಮತ್ತು 2021-22 ಈ ಮೂರು ಶೈಕ್ಷಣಿಕ ಸಾಲುಗಳಲ್ಲಿ ಆಗಿಂದಾಗ್ಗೆ ರಾಜ್ಯದ ಶಾಲೆಗಳನ್ನು ಸ್ಥಗಿತಗೊಳಿಸಿರುವುದರಿಂದಾಗಿ ಶೇಕಡಾ 50 ರಿಂದ 60 ರಷ್ಟು ದಿನಗಳಲ್ಲಿ ಮಾತ್ರ ಭೌತಿಕವಾಗಿ ಶಾಲೆಗಳನ್ನು ನಿರ್ವಹಣೆ ಮಾಡಲಾಗಿದೆ. ಇದರಿಂದಾಗಿ ರಾಜ್ಯದ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆ ಉಂಟಾಗಿರುತ್ತದೆ. ಶಾಲೆಗಳಲ್ಲಿ ಭೌತಿಕ ತರಗತಿಗಳನ್ನು ನಡೆಸಲು ಸಾಧ್ಯವಾಗದೇ ಪರ್ಯಾಯ ಮಾರ್ಗಗಳ ಮುಖಾಂತರ / ಆನ್‌ಲೈನ್ ಮೂಲಕ ಶಿಕ್ಷಣವನ್ನು ನೀಡಲಾಗಿದೆ/ನೀಡಲಾಗುತ್ತಿದೆ. ಆದಾಗ್ಯೂ ಸದರಿ ಪರ್ಯಾಯ ವಿಧಾನದ ಮೂಲಕ ನಿರೀಕ್ಷಿತ ಮಟ್ಟದ ಕಲಿಕಾ ಪ್ರಗತಿ ಉಂಟಾಗಿರುವುದಿಲ್ಲ ಎಂಬುದನ್ನು ಅವಗಾಹಿಸಿದೆ.

ಪ್ರಯುಕ್ತ ಈ ಕಲಿಕಾ ಹಿನ್ನಡೆಯನ್ನು / ಕಲಿಕಾ ಕೊರತೆಯನ್ನು(Learning loss) ಸರಿದೂಗಿಸಲು ಉಲ್ಲೇಖ(2) ರಂತೆ **ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಶೈಕ್ಷಣಿಕ ವರ್ಷದ ಪೂರ್ಣಾವಧಿಯಲ್ಲಿ ಪ್ರಸ್ತುತ ಸಾಲಿನ ಪಠ್ಯ ವಸ್ತುವಿನ ಬೋಧನೆಗೆ ಹಿನ್ನಡೆಯಾಗದಂತೆ/ ಸಹಕಾರಿಯಾಗುವಂತೆ ಆಯೋಜಿಸಲಾಗಿದೆ ಮತ್ತು ಈ ಸಂಬಂಧ ಶೈಕ್ಷಣಿಕ ವರ್ಷವನ್ನು ದಿನಾಂಕ: 16-05-2022 ರಿಂದಲೇ ಪ್ರಾರಂಭಿಸಿ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದರ ಮೂಲಕ ಕಲಿಕಾ ಚೇತರಿಕೆ ವರ್ಷ**ವೆಂದು ಕಾರ್ಯಸೂಚಿಯನ್ನು ರೂಪಿಸಲಾಗಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 2022-23 ನೇ ಶೈಕ್ಷಣಿಕ ಸಾಲಿನಲ್ಲಿ ಏಕರೂಪದ ಶೈಕ್ಷಣಿಕ ಚಟುವಟಿಕೆಗಳನ್ನು ಜಾರಿಗೊಳಿಸಲು ಅನುವಾಗುವಂತೆ ಉಲ್ಲೇಖ(1) ಮತ್ತು (2) ರಲ್ಲಿ ಈಗಾಗಲೇ ಶೈಕ್ಷಣಿಕ ವರ್ಷದ ಪ್ರಾರಂಭ ಮತ್ತು ಕಲಿಕಾ ಪೂರಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ. ಮುಂದುವರೆದು ಶೈಕ್ಷಣಿಕ ಸಾಲಿನ ಚಟುವಟಿಕೆಗಳನ್ನು ಸಮಗ್ರ ನಿರ್ವಹಣೆಗೆ ಸಹಕಾರಿಯಾಗುವಂತೆ ವಾರ್ಷಿಕ ಕಾರ್ಯಸೂಚಿಯನ್ನು ಸಿದ್ದಪಡಿಸಿ ಅನುಬಂಧಿಸಿದೆ. ಅದರಂತೆ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದೆ.

Kiran Raghupathi

## 2022-23 ನೇ ಸಾಲಿನ ಶಾಲಾ ಕರ್ತವ್ಯದ ದಿನಗಳು.

| | |
|---|---|
| ಮೊದಲನೇ ಅವಧಿ | ದಿನಾಂಕ: 16.05.2022 ರಿಂದ 02.10.2022 |
| ಎರಡನೇ ಅವಧಿ | ದಿನಾಂಕ: 17.10.2022 ರಿಂದ 10.04.2023 |

## 2022-23 ನೇ ಸಾಲಿನ ರಜಾ ದಿನಗಳು.

| | |
|---|---|
| ದಸರಾ ರಜೆ. | ದಿನಾಂಕ: 03.10.2022 ರಿಂದ 16.10.2022 |
| ಬೇಸಿಗೆ ರಜೆ | ದಿನಾಂಕ:: 11.04.2023 ರಿಂದ 28.05.2023 |

ಮೇಲ್ಕಂಡಂತೆ 2022-23 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾ ಕರ್ತವ್ಯದ ಅವಧಿಯನ್ನು ಮತ್ತು ರಜಾ ಅವಧಿಯನ್ನು ಪರಿಗಣಿಸಿ ನಿಗದಿಪಡಿಸಲಾಗಿರುವ ಮಾಸಿಕ ಶಾಲಾ ಕರ್ತವ್ಯದ (ಬೋಧನಾ) ದಿನಗಳು ಮತ್ತು ರಜಾ ದಿನಗಳ ವಿವರಗಳು ಕೆಳಕಂಡಂತಿದೆ.

| ಕ್ರ.ಸಂ. | ತಿಂಗಳು ಮತ್ತು ವರ್ಷ | ಲಭ್ಯವಿರುವ ತಿಂಗಳಿನ ಒಟ್ಟು ದಿನಗಳು | ಒಟ್ಟು ಸರ್ಕಾರಿ ರಜಾ ದಿನಗಳು. | ಲಭ್ಯವಾಗುವ ಶಾಲಾ ಕರ್ತವ್ಯದ ದಿನಗಳು |
|---|---|---|---|---|
| 01 | 16 ಮೇ 2022 ರಿಂದ 31/ಮೇ/2022 | 16 | 02 | 14 |
| 02 | ಜೂನ್-2022 | 30 | 04 | 26 |
| 03 | ಜುಲೈ-2022 | 31 | 05 | 26 |
| 04 | ಆಗಸ್ಟ್-2022 | 31 | 07 | 24 |
| 05 | ಸೆಪ್ಟಂಬರ್-2022 | 30 | 04 | 26 |
| 06 | ಅಕ್ಟೋಬರ್-2022 | 31 | 09 | 22 |
| 07 | ನವಂಬರ್-2022 | 30 | 06 | 24 |
| 08 | ಡಿಸೆಂಬರ್-2022 | 31 | 04 | 27 |
| 09 | ಜನವರಿ-2023 | 31 | 06 | 25 |
| 10 | ಫೆಬ್ರವರಿ-2023 | 28 | 05 | 23 |
| 11 | ಮಾರ್ಚ್-2023 | 31 | 05 | 26 |
| 12 | 01- ಏಪ್ರಿಲ್-2023 ರಿಂದ 10 ಏಪ್ರಿಲ್-2023 | 10 | 03 | 07 |
| | ಒಟ್ಟು | 330 | 60 | 270 |
| ಅ | ವಿವೇಚನಾ ರಜೆಗಳು (ಸ್ಥಳೀಯ ರಜೆಗಳು) | | | -04 |
| ಆ | ದಸರಾ ರಜೆ ಒಟ್ಟು 14 ದಿನಗಳು (10 ಶಾಲಾ ಕರ್ತವ್ಯ ದಿನಗಳು + 04 ಸರ್ಕಾರಿ ರಜೆಗಳು ಸೇರಿದಂತೆ) | | | -10 |
| ಇ | ಶೈಕ್ಷಣಿಕ ಸಾಲಿನಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಲಭ್ಯವಾಗುವ ಒಟ್ಟು ಶಾಲಾ ಕರ್ತವ್ಯದ ದಿನಗಳು | | | 256 |

Kiran Raghupathi

| | | |
|---|---|---|
| | • ಪಠ್ಯೇತರ ಚಟುವಟಿಕೆಗಳಾದ ಪ್ರತಿಭಾಕಾರಂಜಿ/ ಕ್ರೀಡಾ ಕೂಟ / ಶೈಕ್ಷಣಿಕ ಚಟುವಟಿಕೆಗಳ ಸ್ಪರ್ಧೆಗಳು( ವಿಜ್ಞಾನ ವಸ್ತು ಪ್ರದರ್ಶನ, ರಸ ಪ್ರಶ್ನೆ ಕಾರ್ಯಕ್ರಮ, ಅಣುಕು ಸಂಸತ್, ಇನ್ಸ್ಪೈರ್ ಅವಾರ್ಡ್, ಇತರೆ) ಚಟುವಟಿಕೆಗಳಿಗಾಗಿ<br>• ಪರೀಕ್ಷೆಗಳು ಮತ್ತು ಸಿಸಿಇ ಮೌಲ್ಯಾಂಕನ ವಿಶ್ಲೇಷಣೆಗಾಗಿ<br>• ಪೋಷಕರ ಸಭೆ/ ಶಾಲಾ ಹಬ್ಬಗಳು/ ಶೈಕ್ಷಣಿಕ ಪ್ರವಾಸಗಳು/ ಇತರೆ | - 10<br>- 12<br>- 06 |
| ಈ | ಅಂತಿಮವಾಗಿ ಬೋಧನಾ ಕಲಿಕೆ ಪ್ರಕ್ರಿಯೆಗೆ ಉಳಿಕೆ ದಿನಗಳು | 228 |

<u>ನಿಬಂಧನೆಗಳು:</u>

ಮಕ್ಕಳ ಶಾಲಾ ಪ್ರವೇಶಾತಿಯನ್ನು/ ದಾಖಲಾತಿಯನ್ನು ದಿನಾಂಕ: 16/05/2022 ರಿಂದ ಆರಂಭಿಸಿ ದಿನಾಂಕ: 31/07/2022 ರೊಳಗಾಗಿ ಮುಕ್ತಾಯಗೊಳಿಸತಕ್ಕದ್ದು.

1. ಕೋವಿಡ್-19 ರಂತಹ ಪ್ರತಿಕೂಲ ಸನ್ನಿವೇಶದ ಹಿನ್ನಲೆಯಲ್ಲಿ ಶಾಲೆಗಳನ್ನು ಭೌತಿಕವಾಗಿ ಪ್ರಾರಂಭಿಸಲು ಪರಿಸ್ಥಿತಿ ಸಹಕಾರಿಯಾಗದಿದ್ದಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪರ್ಯಾಯ ಮಾರ್ಗಗಳನ್ನು (ವಿದ್ಯಾಗಮ, ದೂರದರ್ಶನ, ಸಂವೇದ, ಬಾನುಲಿ, ಆನ್-ಲೈನ್ ಮತ್ತು ಇತರ ಆಫ್-ಲೈನ್ ಮಾರ್ಗಗಳ ಮುಖಾಂತರ)ಮುಂದಾಲೋಚಿಸಿ ಚಾಲನೆಗೊಳಿಸುವುದರೊಂದಿಗೆ ಮಕ್ಕಳು ನಿರಂತರ ಕಲಿಕೆಯಲ್ಲಿ ಪಾಲ್ಗೊಳ್ಳುವ ಮೂಲಕ ಕಲಿಕಾ ಪ್ರಗತಿ ಸಾಧಿಸುವಂತೆ ಮಾಡುವುದು. ಯಾವುದೇ ಕಾರಣಕ್ಕೂ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸಬಾರದು. ಭೌತಿಕವಾಗಿ ಶಾಲೆಗಳನ್ನು ನಡೆಸಲು ಸಾಧ್ಯವಾಗದೆ ಇದ್ದ ಸಂದರ್ಭದಲ್ಲಿ ಪರ್ಯಾಯ ಮಾರ್ಗಗಳ ಮೂಲಕ ಶಿಕ್ಷಣ ನೀಡುವ ಕುರಿತು ವಿವರವಾದ ಮಾರ್ಗಸೂಚಿಯನ್ನು ಅವಶ್ಯವಿದ್ದಲ್ಲಿ ನಂತರ ಹೊರಡಿಸಲಾಗುವುದು.
2. ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ, ಡಾ ॥ ಬಿ.ಆರ್. ಅಂಬೇಡ್ಕರ್ ಜಯಂತಿ, ನಾಡ ಹಬ್ಬವಾದ ಕರ್ನಾಟಕ ರಾಜ್ಯೋತ್ಸವ ಮುಂತಾದವುಗಳನ್ನು ಆಯಾ ದಿನಗಳಂದು ಶಾಲೆಗಳಲ್ಲಿ ಕಡ್ಡಾಯವಾಗಿ ಆಚರಿಸುವುದು.
3. ಕ್ರಿಸ್‌ಮಸ್ ರಜೆ ಬೇಡಿಕೆಯನ್ನು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಸಲ್ಲಿಸಿದಲ್ಲಿ ಈ ಬಗ್ಗೆ ಆಯಾ ಉಪನಿರ್ದೇಶಕರು(ಆಡಳಿತ) ರವರು ಆ ಕುರಿತು ಪರಿಶೀಲಿಸಿ ನಿರ್ಧರಿಸುವುದು. ಡಿಸೆಂಬರ್ ಮಾಹೆಯಲ್ಲಿ ನೀಡುವ ಕ್ರಿಸ್‌ಮಸ್ ರಜಾ ಅವಧಿಯನ್ನು ಅಕ್ಟೋಬರ್ ಮಾಹೆಯ ಮಧ್ಯಂತರ ರಜೆಯಲ್ಲಿ ಕಡಿತಗೊಳಿಸಿ ಸರಿದೂಗಿಸಿಕೊಳ್ಳಲು ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರು ಕ್ರಮವಹಿಸತಕ್ಕದ್ದು.
4. ರಾಜ್ಯ ಮಟ್ಟದ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ಮೇಳ ಕಾರ್ಯಕ್ರಮಗಳನ್ನು ಆಯೋಜಿಸುವ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ರವರು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ದಸರಾ ಮಧ್ಯಂತರ ರಜಾ ಅವಧಿಯನ್ನು ಅವಶ್ಯಕತೆಗನುಗಣವಾಗಿ ಮಾರ್ಪಡಿಸಿಕೊಳ್ಳುವುದರ ಮೂಲಕ ಸದರಿ ಕಾರ್ಯಕ್ರಮಗಳ ಆಯೋಜನೆಯಿಂದ ಕೊರತೆಯಾಗುವ ಶಾಲಾ ಕರ್ತವ್ಯದ ಅವಧಿಗಳನ್ನು ಸರಿದೂಗಿಸಿಕೊಳ್ಳತಕ್ಕದ್ದು..
5. ಮುಷ್ಕರ ಇನ್ನಿತರೆ ಅನಿರೀಕ್ಷಿತ ಕಾರಣಗಳಿಂದಾಗಿ ಶಾಲೆಗಳಿಗೆ ರಜೆ ಘೋಷಣೆಯಾದಲ್ಲಿ ಆ ಅವಧಿಯ ಶಾಲಾ ಕರ್ತವ್ಯದ ದಿನಗಳನ್ನು ಮುಂದಿನ ರಜಾ ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಶಾಲೆಗಳನ್ನು ನಡೆಸುವುದರ ಮೂಲಕ ನಿಗದಿಪಡಿಸಿದ ಶಾಲಾ ಕರ್ತವ್ಯದ ದಿನಗಳು

Kiran Raghupathi

ಕಡಿಮೆಯಾಗದಂತೆ ಸರಿದೂಗಿಸಿಕೊಳ್ಳಲು ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರು ಕ್ರಮ ವಹಿಸುವುದು.

6. ಪರೀಕ್ಷಾ ದಿನಗಳು, ಮೌಲ್ಯಾಂಕನ ದಿನಗಳು ಹಾಗೂ ಪೂರಕ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ದಿನಗಳನ್ನು ಕೂಡ ಶಾಲಾ ಕರ್ತವ್ಯದ ದಿನಗಳೆಂದು ನಿಗದಿತ ಅವಧಿಗಳಲ್ಲಿ ಪರಿಗಣಿಸುವುದು.
7. ಪ್ರಸ್ತುತ ಸದರಿ ಸುತ್ತೋಲೆಯೊಂದಿಗೆ 2022-23 ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಕಾರ್ಯಸೂಚಿಯನ್ನು ಬಿಡುಗಡೆ ಮಾಡಿದ್ದು, ಅದರಂತೆ ಮುಂದುವರೆಯುವುದು. ಪ್ರಸ್ತುತ ಸಾಲಿನಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಡಿ.ಎಸ್.ಇ.ಆರ್.ಟಿ ನೀಡುವ ಮಾರ್ಗಸೂಚಿಯಂತೆ ಪ್ರಸಕ್ತ ಸಾಲಿನ ಪಠ್ಯವಸ್ತು ಬೋಧನೆಗೆ ಹಿನ್ನಡೆಯಾಗದಂತೆ ಬೋಧನಾ ಕಲಿಕಾ ಪ್ರಕ್ರಿಯೆ ನಿರ್ವಹಿಸಿ ಕಾಲಕಾಲಕ್ಕೆ ಮೌಲ್ಯಾಂಕನ ವಿಶ್ಲೇಷಣೆ ಮಾಡುವುದರೊಂದಿಗೆ ಮಕ್ಕಳ ಕಲಿಕಾ ಪ್ರಗತಿಯನ್ನು ದಾಖಲಿಸುವುದು.
8. ಮೇಲ್ಕಂಡ ಕಾರ್ಯಸೂಚಿಯಂತೆ ಶಾಲಾ ಹಂತ/ ಬ್ಲಾಕ್ ಹಂತ/ ಜಿಲ್ಲಾ ಹಂತದಲ್ಲಿ ಸಂಬಂಧಿಸಿದ ಅಧಿಕಾರಿ ಸಿಬ್ಬಂದಿಗಳು ಸಭೆ ನಡೆಸಿ, ಚರ್ಚಿಸಿ ತಮ್ಮ ವ್ಯಾಪ್ತಿಯ ವಾರ್ಷಿಕ ಕ್ರಿಯಾ ಯೋಜನೆಯನ್ನು ರಚನಾತ್ಮಕವಾಗಿ ಪ್ರಾದೇಶಿಕ ಅವಶ್ಯಕತೆಗಳಿಗೆ ಅನುಗುಣವಾಗಿ ತಯಾರಿಸಿಕೊಂಡು ಅನುಪಾಲನೆ ಮಾಡುವುದರೊಂದಿಗೆ ಅನುಷ್ಠಾನಗೊಳಿಸುವುದು.
9. ಶೈಕ್ಷಣಿಕ ವರ್ಷದಲ್ಲಿನ ಪರೀಕ್ಷೆಗಳು ಮತ್ತು ಮೌಲ್ಯಾಂಕನ ವಿಶ್ಲೇಷಣೆ ಕುರಿತು ಡಿಎಸ್ಇಆರ್‌ಟಿ ವತಿಯಿಂದ ಪ್ರತ್ಯೇಕವಾಗಿ ಮಾರ್ಗಸೂಚಿ ನೀಡಲಾಗುವುದು. ಅದರಂತೆ ಪ್ರಸಕ್ತ ಸಾಲಿನ ಕಲಿಕಾ ಪ್ರಗತಿಯನ್ನು ಅಂತಿಮಗೊಳಿಸಿ ಎಸ್‌ಎಟಿಎಸ್‌ನಲ್ಲಿ ದಾಖಲಿಸುವುದು.
10. ಸದರಿ ಕಾರ್ಯಸೂಚಿಯು ಕಾಲಕಾಲಕ್ಕೆ ಬದಲಾಗುವ ಪರಿಸ್ಥಿತಿಗೆ ಅನುಗುಣವಾಗಿ ಮತ್ತು ಸರ್ಕಾರ/ ಇಲಾಖೆ/ ಹೊರಡಿಸುವ ಆದೇಶಾನುಸಾರ ಮಾರ್ಪಾಡು ಮಾಡುವ ಷರತ್ತಿಗೊಳಪಡಿಸಿ ಜಾರಿಗೊಳಿಸಿದೆ.

20/04/2022.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ:-**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸುತ್ತಾ ಮೇಲ್ಕಂಡಂತೆ ಕ್ರಮವಹಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಆಯಾ ಉಪನಿರ್ದೇಶಕರು(ಆಡಳಿತ) ಇವರ ಮೂಲಕ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ,
3. ರಾಜ್ಯದ ಎಲ್ಲಾ ಶಾಲಾ ಮುಖ್ಯಸ್ಥರಿಗೆ (ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ) ಮುಂದಿನ ಕ್ರಮಕ್ಕಾಗಿ,

**ಪ್ರತಿಯನ್ನು ಮಾಹಿತಿಗಾಗಿ,**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಗೌರವಪೂರ್ವಕವಾಗಿ ಸಲ್ಲಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಲಾಗಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

Kiran Raghupathi

# ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

---

### ಅನುಬಂಧ-01

## *2022-23ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿ*

ಪ್ರಸ್ತುತ 2022-23 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಆಯೋಜಿಸಿರುವುದರೊಂದಿಗೆ ಕಳೆದ 03 ವರ್ಷಗಳಲ್ಲಿನ ಕಲಿಕಾ ಕೊರತೆಯನ್ನು ಸರಿದೂಗಿಸಬೇಕಿದೆ. ಪ್ರಯುಕ್ತ ಮಕ್ಕಳ ಕಲಿಕಾಭಿವೃದ್ಧಿಗೋಸ್ಕರ ಪ್ರಸಕ್ತ ವರ್ಷವನ್ನು "**ಕಲಿಕಾ ಚೇತರಿಕೆ ವರ್ಷ**"ವೆಂದು ಸಂಕಲ್ಪಿಸಿ, ವಾರ್ಷಿಕ ಪಠ್ಯವಸ್ತು ಬೋಧನೆಯನ್ನು ಕಲಿಕಾ ಚೇತರಿಕೆ ಕಾರ್ಯಕ್ರಮದೊಂದಿಗೆ ಸಂಯೋಜಿಸಿ ವಾರ್ಷಿಕ ಕಾರ್ಯಸೂಚಿ ತಯಾರಿಸಿದೆ.

ಸದರಿ ವಾರ್ಷಿಕ ಕಾರ್ಯಸೂಚಿಯು ವಾರ್ಷಿಕ ಪಾಠ ಹಂಚಿಕೆ, ಪಠ್ಯೇತರ ಚಟುವಟಿಕೆಗಳು, ಪರೀಕ್ಷೆ ಮತ್ತು ಮೌಲ್ಯಂಕನ ವಿಶ್ಲೇಷಣೆ (ಸಿ.ಸಿ.ಇ) ಹಾಗೂ ವಿವಿದ ಶಾಲಾ ಹಂತದ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಹಾಯವಾಗುವಂತೆ ಮಾಹೆವಾರು ಹಂಚಿಕೆ ಮಾಡಿ ನಿಗಧಿಪಡಿಸಿದೆ. ಇದನ್ನು ಸಲಹಾತ್ಮಕವಾಗಿ ನೀಡಿದ್ದು ಸರ್ಕಾರಿ ಮತ್ತು ಇಲಾಖೆ ಕಾಲಕಾಲಕ್ಕೆ ನೀಡುವ ಆದೇಶಾನುಸಾರವಾಗಿ ಬದಲಾವಣೆ ಮಾಡುವ ಷರತ್ತಿಗೊಳಪಟ್ಟು ರೂಪಿಸಿದೆ. ಅದರಂತೆ ಜಿಲ್ಲೆ/ತಾಲ್ಲೂಕು/ಕ್ಲಸ್ಟರ್ ಹಾಗೂ ಶಾಲಾ ಹಂತದಲ್ಲಿ ಸಂಬಂಧಿಸಿದ ಅಧಿಕಾರಿ ಸಿಬ್ಬಂದಿಗಳು ಚರ್ಚಿಸಿ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮವಹಿಸಲು ಸೂಚಿಸಿದೆ.

**ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿಯ ಘೋಷ್ವಾರೆ**

| ತಿಂಗಳು | ಲಭ್ಯವಾಗುವ ಶಾಲಾ ಕರ್ತವ್ಯದ ದಿನಗಳು | ಸಿ.ಸಿ.ಇ ಅಡಿ ಚಟುವಟಿಕೆಗಳ ನಿರ್ವಹಣೆ (Project Works) | ಪರೀಕ್ಷೆಗಳು ಮತ್ತು ಮೌಲ್ಯಾಂಕನ ವಿಶ್ಲೇಷಣೆ | ಪಠ್ಯೇತರ ಚಟುವಟಿಕೆಗಳು/ ಸಭೆಗಳು/ ಇತರೆ ಚಟುವಟಿಕೆಗಳು |
|---|---|---|---|---|
| ಮೇ | 14 | - | - | ದಾಖಲಾತಿ ಆಂದೋಲನ |
| ಜೂನ್ | 26 | √ | ಕಲಿಕಾ ಕೊರತೆ/ ಪ್ರಗತಿ ತಿಳಿಯಲು ನೈದಾನಿಕ ಪರೀಕ್ಷೆ | ಪೂರ್ವಭಾವಿ ಸಭೆ ಶಾಲಾ ಹಂತದಲ್ಲಿ ವಿವಿಧ ಶೈಕ್ಷಣಿಕ ಕ್ಲಬ್‌ಗಳನ್ನು ರಚಿಸಿ ನಿರ್ವಹಿಸುವುದು. |
| ಜುಲೈ | 26 | √ | ಎಫ್.ಎ-1 | ಶಾಲಾ/ ಕ್ಲಸ್ಟರ್/ ಹೋಬಳಿ ಮಟ್ಟದ ಕ್ರೀಡಾಕೂಟ/ ತಾಯಂದಿರ ಸಭೆ ಇತರೆ ಚಟುವಟಿಕೆಗಳು. |
| ಆಗಸ್ಟ್ | 24 | √ | | ತಾಲ್ಲೂಕು ಮಟ್ಟದ ಕ್ರೀಡಾಕೂಟ/ ಇತರೆ ಚಟುವಟಿಕೆಗಳು. |
| ಸೆಪ್ಟಂಬರ್ | 26 | √ | ಎಫ್.ಎ-2 | ಜಿಲ್ಲಾ ಮಟ್ಟದ ಕ್ರೀಡಾಕೂಟ/ ಇತರೆ ಚಟುವಟಿಕೆಗಳು |
| ಆಕ್ಟೋಬರ್ | 22 | - | ಎಸ್.ಎ-1 | ಸಮುದಾಯದತ್ತ ಶಾಲೆ |
| ನವಂಬರ್ | 24 | √ | | ಕ್ಲಸ್ಟರ್/ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ/ ಇತರೆ ಚಟುವಟಿಕೆಗಳು |
| ಡಿಸೆಂಬರ್ | 27 | √ | ಎಫ್.ಎ-3 | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ/ ಅಣುಕು ಸಂಸತ್ತ್ |
| ಜನವರಿ | 25 | √ | ಎಫ್.ಎ-4 | ತಾಯಂದಿರ ಸಭೆ |



Kiran Raghupathi

| | | | | |
|---|---|---|---|---|
| ಫೆಬ್ರವರಿ | 23 | √ | ಪೂರ್ವಭಾವಿ ಪರೀಕ್ಷೆ | ವಿಜ್ಞಾನ ವಸ್ತು ಪ್ರದರ್ಶನ |
| ಮಾರ್ಚ್ | 26 | – | ಎಸ್.ಎ–2 | |
| ಏಪ್ರಿಲ್ | 7 | – | ಮೌಲ್ಯಾಂಕನ | ಸಮುದಾಯದತ್ತ ಶಾಲೆ |
| ಒಟ್ಟು | 270 | | | |

## 2022–23 ನೇ ಸಾಲಿನ ಮಾಹೆವಾರು ಶೈಕ್ಷಣಿಕ ಕಾರ್ಯಕ್ರಮಗಳ / ಚಟುವಟಿಕೆಗಳ ಕಾರ್ಯಸೂಚಿ

| ದಿನಾಂಕ | ಕಾರ್ಯಕ್ರಮದ ವಿವರ | ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು [ಪ್ರಕ್ರಿಯೆಯ ಸಂಕ್ಷಿಪ್ತ ವಿವರ] |
|---|---|---|
| **ಮೇ–2022** | | |
| 14.05.2022 | ಶಾಲೆ ಪ್ರಾರಂಭ ಮತ್ತು ಪ್ರಾರಂಭೋತ್ಸವದ ಪೂರ್ವ ಸಿದ್ಧತೆ. | *ಪೂರ್ವ ಸಿದ್ಧತೆ:*<br>1. ಶಾಲಾ ಸ್ವಚ್ಛತೆ ಕಾರ್ಯ & ಶಾಲೆಯಲ್ಲಿ ವಿವಿಧ ಸುರಕ್ಷತೆ ಕ್ರಮಗಳನ್ನು ಪರಿಶೀಲಿಸಿ ಸರಿಪಡಿಸುವುದು.<br>2. ಎಸ್.ಡಿ.ಎಂ.ಸಿ ಸಭೆ ನಡೆಸಿ ಶಾಲಾ ಪ್ರಾರಂಭೋತ್ಸವದ ಬಗ್ಗೆ ಚರ್ಚೆ ಮಾಡುವುದು.<br>3. ಈಗಾಗಲೇ ಸಿದ್ಧಪಡಿಸಿರುವ ಕೆಳಗೆ ನಮೂದಿಸಿರುವ ಶಾಲಾ ದಾಖಲೆಗಳ ಜೋಡಣೆ/ಪ್ರದರ್ಶನ.<br>▪ ಶಾಲಾ ವೇಳಾ ಪಟ್ಟಿ.<br>▪ ಶಿಕ್ಷಕರ ವೇಳಾಪಟ್ಟಿ(ತರಗತಿವಾರು, ಶಿಕ್ಷಕರವಾರು)<br>▪ ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸುವುದು.<br>▪ ಶಾಲಾ ಪಂಚಾಂಗ.<br>4. ಕಡ್ಡಾಯವಾಗಿ ಎಲ್ಲಾ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಪಾಲ್ಗೊಳ್ಳುವುದು ಮತ್ತು ಪ್ರಾರಂಭೋತ್ಸವಕ್ಕೆ ಪೂರ್ವ ತಯಾರಿ ಮಾಡಿಕೊಳ್ಳುವುದು.<br>*ಮುಖ್ಯ ಶಿಕ್ಷಕರು ತರಗತಿಯ ಶಿಕ್ಷಕರನ್ನು ನೇಮಿಸುವುದು.*<br>1. ಪ್ರಸ್ತುತ ವರ್ಷದಲ್ಲಿ ಹಿಂದಿನ ತರಗತಿಗಳಿಂದ ಉತ್ತೀರ್ಣ ರಾಗಿರುವ ಮಕ್ಕಳ ಹಾಜರಾತಿ ವಹಿಗಳನ್ನು (Students Attendance Register) ಸಿದ್ಧಪಡಿಸುವುದು.<br>2. ಶಿಕ್ಷಕ/ಶಿಕ್ಷಕಿಯರು ತಮ್ಮ ಶೈಕ್ಷಣಿಕ ದಾಖಲೆಗಳಾದ ವಾರ್ಷಿಕ ಕಾರ್ಯ ಯೋಜನೆ, ಕಲಿಕಾ ಚೇತರಿಕೆ ಯೋಜನೆ, ಪಾಠ ಯೋಜನೆ, ಮುಂತಾದವುಗಳಿಗೆ ಮುಖ್ಯ ಶಿಕ್ಷಕರಿಂದ ಅನುಮೋದನೆ ಪಡೆದುಕೊಳ್ಳುವುದು.<br>3. ಮುಖ್ಯಶಿಕ್ಷಕರು ಸಹಶಿಕ್ಷಕರೊಡಗೂಡಿ ಸಮುದಾಯದ ಸಹಭಾಗಿತ್ವದೊಂದಿಗೆ ಶಾಲಾ ಪ್ರಾರಂಭೋತ್ಸವಕ್ಕೆ ಸಂಪೂರ್ಣ ಸಿದ್ದತೆ ಮಾಡಿಕೊಳ್ಳುವುದು.<br>4. ಸಮುದಾಯದೊಂದಿಗೆ ಸೇರಿ ಜಾಥಾ ಮಾಡಿ ಶಾಲಾ ಪ್ರಾರಂಬೋತ್ಸವದ ದಿನವೇ ಅಂದರೆ 16.05.2022 ರಂದೇ ಮಕ್ಕಳು ಶಾಲೆಗೆ ಬರಲು ಅರಿವು ಮೂಡಿಸುವುದರ ಜೊತೆಗೆ ಪೋಷಕರನ್ನು ಶಾಲಾ ಪ್ರಾರಭೋತ್ಸವಕ್ಕೆ ಆಹ್ವಾನಿಸುವುದು. |
| 14.05.2022 | ಪೂರ್ವಭಾವಿ ಸಭೆಗಳು, ವಿವಿಧ ಹಂತದ ತರಬೇತಿಗಳು ಮತ್ತು ಸಮಾಲೋಚನಾ ಸಭೆಗಳಲ್ಲಿನ ನಿರ್ಣಯಗಳ ಅಂಗೀಕಾರ. | ಶೈಕ್ಷಣಿಕ ವರ್ಷದ ವಾರ್ಷಿಕ ಚಟುವಟಿಕೆಗಳಾದ ಬೋಧನಾ ಕಲಿಕೆಗೆ ಮಾಹೆವಾರು ಪಾಠ ಹಂಚಿಕೆ, ಪರೀಕ್ಷೆಗಳು ಹಾಗೂ ಮೌಲ್ಯಮಾಪನ ವಿಶ್ಲೇಷಣೆ, ವಿವಿಧ ಕಾರ್ಯಕ್ರಮಗಳ ನಿರ್ವಹಣೆಗಾಗಿ ಅವಧಿ ಮತ್ತು ದಿನಾಂಕಗಳನ್ನು ಪೂರ್ವ ಭಾವಿಯಾಗಿ ನಿಗದಿಪಡಿಸುವ ಕುರಿತು ಚರ್ಚೆ ಮತ್ತು ಶಾಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪ್ರಭಾರಗಳಾದ (ತರಗತಿ ಶಿಕ್ಷಕರು, ಶೈಕ್ಷಣಿಕ ಪ್ರವಾಸ / ಕ್ರೀಡೆ/ ವಾರ್ಷಿಕೋತ್ಸವ / ಆಚರಣೆಗಳು ಇತರೆ) ಅನುಷ್ಠಾನಕ್ಕೆ ಹಂಚಿಕೆ ಮಾಡುವುದು. |



Kiran Raghupathi

| | | |
|---|---|---|
| 16.05.2022 | **ಶಾಲಾ ಪ್ರಾರಂಭೋತ್ಸವ** | ಶಾಲಾ ಪ್ರಾರಂಭೋತ್ಸವವನ್ನು ಒಂದು ಯಾಂತ್ರಿಕ ಪ್ರಕ್ರಿಯೆ ಎಂದು ಪರಿಗಣಿಸದೆ ಅತ್ಯಂತ ಉತ್ಸಾಹದಿಂದ ಮುಖ್ಯಶಿಕ್ಷಕರು. ಸಹಶಿಕ್ಷಕರು. ಎಸ್.ಡಿ.ಎಂ.ಸಿ ಹಾಗೂ ಪೋಷಕರು ಸೇರಿ ಶಾಲಾ ಮಕ್ಕಳನ್ನು, ಗಣ್ಯ ಅತಿಥಿಗಳನ್ನು ಸ್ವಾಗತಿಸುವ ರೀತಿಯಲ್ಲಿ ವಿಶೇಷವಾಗಿ ಸ್ವಾಗತಿಸುವುದು.<br>1. ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಭೌತಿಕ ವಾತಾವರಣವನ್ನು ಆಕರ್ಷಣೀಯವಾಗಿರಿಸುವುದು.<br>2. ಮೊದಲ ಎರಡು ಅವಧಿಗಳಲ್ಲಿ ಮಕ್ಕಳನ್ನು ಆಹ್ವಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಮೂರನೆಯ ಅವಧಿಯಿಂದಲೇ ಹಾಜರಾಗಿರುವ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸುವುದು. ಹಾಜರಾಗದಿರುವ ಮಕ್ಕಳನ್ನು ಶಾಲೆಗೆ ಕರೆತರುವಂತೆ ಹಾಜರಾಗಿರುವ ಮಕ್ಕಳನ್ನು ಪ್ರೇರೇಪಿಸುವುದು.<br>3. ಮೊದಲನೆಯ ದಿನದಿಂದಲೇ ಪಾಠ ಪ್ರವಚನಗಳನ್ನು ಆರಂಭಿಸುವುದು. ಈ ಮಾಹಿತಿ ಮಕ್ಕಳಿಗೆ ಮತ್ತು ಪೋಷಕರಿಗೆ ತಲುಪುವಂತೆ ಮಾಡುವುದು.<br>4. ಅಕ್ಷರ ದಾಸೋಹದ ಕಾರ್ಯಕ್ರಮದಡಿ ಮಧ್ಯಾಹ್ನದ ಸಿಹಿ ಬಿಸಿ ಊಟದ ಕಾರ್ಯಕ್ರಮವನ್ನು ಆಯೋಜಿಸುವುದು.<br>5. ಸರ್ಕಾರಿ ಉತ್ತೇಜಕಗಳಾದ ಪಠ್ಯಪುಸ್ತಕ, ಸಮವಸ್ತ್ರ, ಇತ್ಯಾದಿಗಳನ್ನು ಸಂಗ್ರಹಿಸಿ ಶಾಲಾ ಪ್ರಾರಂಭೋತ್ಸವದ ಸಂದರ್ಭದಲ್ಲಿ ಗಣ್ಯರ ಸಮ್ಮುಖದಲ್ಲಿ ವಿತರಿಸುವುದು (ಅಗತ್ಯಬಿದ್ದಲ್ಲಿ ಬುಕ್ ಬ್ಯಾಂಕ್ ಪ್ರಯೋಜನ ಪಡೆಯುವುದು).<br>**ವಿ.ಸೂ:** ಎಲ್ಲಾ ಶಿಕ್ಷಕ/ಶಿಕ್ಷಕಿಯರು ಶಾಲಾ ಪ್ರಾರಂಭೋತ್ಸವದ ಕಾರ್ಯಕ್ರಮವನ್ನು ತಮ್ಮ ಪಾಠ ಪ್ರವಚನಗಳನ್ನು ಆರಂಭಿಸುವುದರೊಂದಿಗೆ ಅರ್ಥಪೂರ್ಣವಾಗಿಸುವುದು. |
| 16.05.2022 ರಿಂದ 20.05.2022 | **ದಾಖಲಾತಿ ಆಂದೋಲನ** | ಕಳೆದ ಸಾಲಿನಲ್ಲಿ ಶಾಲೆಗಳು ಭೌತಿಕವಾಗಿ ನಡೆಯದಿರುವುದು ಹಾಗೂ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗದಿರುವುದರಿಂದ ದಾಖಲಾತಿ ಪ್ರಮಾಣವು ಕಡಿಮೆಯಾಗುವ ಸಾಧ್ಯತೆ ಇದ್ದು, ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಈ ಪ್ರಯುಕ್ತ ಪರಿಣಾಮಕಾರಿಯಾದ ದಾಖಲಾತಿ ಆಂದೋಲನವನ್ನು ಕೆಳಕಂಡಂತೆ ನಿರ್ವಹಿಸುವುದು:<br>ದಿನಾಂಕ:25.05.2022ರ ವರೆಗಿನ ದಾಖಲಾತಿ ಪ್ರಕ್ರಿಯೆಯನ್ನು ಆಧರಿಸಿ, ಹಿಂದಿನ ಸಾಲಿನಲ್ಲಿ ಉತ್ತೀರ್ಣರಾಗಿ ಶಾಲೆಗೆ ಬಾರದಿರುವ ಮಕ್ಕಳು, ಶಾಲೆಗೆ ದಾಖಲಾಗದಿರುವ ಅರ್ಹ ವಯಸ್ಸಿನ ಮಕ್ಕಳ ಮತ್ತು ಶಾಲೆ ಬಿಟ್ಟ ಮಕ್ಕಳ ಪಟ್ಟಿಯನ್ನು ಹಾಜರಾತಿ ಅಧಿಕಾರಿಯಾದ ಶಿಕ್ಷಣ ಸಂಯೋಜಕರುಗಳಿಂದ ಪಡೆದು ಅನುಪಾಲನೆಗೆ ಸಿದ್ಧಪಡಿಸಿಕೊಳ್ಳುವುದು ಮತ್ತು ಎಸ್.ಎ.ಟಿ.ಎಸ್.ನಲ್ಲಿ ಇಂದೀಕರಿಸುವುದು.<br>1. ಶಿಕ್ಷಕರು, ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಸಹಯೋಗದೊಂದಿಗೆ ಇಂತಹ ಮಕ್ಕಳ ಮನೆ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಿ ಶಾಲೆಗೆ ದಾಖಲಿಸುವುದು.<br>2. ಶಾಲಾ ಪ್ರಾರಂಭದ ಅವಧಿಗೆ ಮುಂಚಿತವಾಗಿ ಅದೇ ದಿನ ಜಾಥಾ, ಘೋಷಣೆ ಮತ್ತು ಭಿತ್ತಿಪತ್ರ/ ಕರಪತ್ರಗಳನ್ನು ಹಂಚುವ ಮೂಲಕ ಶಾಲಾ ಶಿಕ್ಷಣದ ಪ್ರಾಮುಖ್ಯತೆ ತಿಳಿಸುವುದು ಹಾಗೂ ದಾಖಲಾತಿ ಆಂದೋಲನವನ್ನು ಅರ್ಥಪೂರ್ಣಗೊಳಿಸುವುದು. |
| 17.05.2022 ರಿಂದ | **ಕಲಿಕಾ ಚೇತರಿಕೆ ವರ್ಷ 2022-23 ಅನುಷ್ಠಾನ** | ಶಿಕ್ಷಕರ ಬಳಿ ಕಳೆದ ಸಾಲಿನಲ್ಲಿ ನಡೆಸಿದ ಮೌಲ್ಯಾಂಕನ ವಿಶ್ಲೇಷಣೆಯ ವರದಿಯಂತೆ ಕಲಿಕಾ ಕೊರತೆಗಳ ದತ್ತಾಂಶಗಳು ಲಭ್ಯವಿರುತ್ತವೆ. |



Kiran Raghupathi

| | | |
|---|---|---|
| 31.05.2022 | **ಕಲಿಕಾ ಚೇತರಿಕೆ ಕಾರ್ಯಕ್ರಮದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವವನ್ನು ಪರಿಚಯಿಸುವುದರೊಂದಿಗೆ ವಾರ್ಷಿಕ ಯೋಜನೆಯನ್ನು ಪರಿಚಯಿಸುವುದು** | ಇವುಗಳನ್ನು ಅವಲೋಕಿಸಿ, ವಿಶ್ಲೇಷಿಸುವುದು. ಇದಕ್ಕೆ ಪೂರಕವಾಗಿ ನೈದಾನಿಕ ಪರೀಕ್ಷೆ ಹಮ್ಮಿಕೊಂಡು ಫಲಿತಾಂಶ ವಿಶ್ಲೇಷಿಸಬೇಕು. ಈ ದತ್ತಾಂಶ ಮತ್ತು ಇಲಾಖೆಯಿಂದ ಸರಬರಾಜಾದ ಕೈಪಿಡಿ, ಮಾರ್ಗಸೂಚಿಯನ್ನಾಧರಿಸಿ ವಿದ್ಯಾರ್ಥಿವಾರು ಕಲಿಕಾ ಕೊರತೆಯನ್ನಾಧರಿಸಿ ಸಿದ್ಧಪಡಿಸಿದ ಕೈಪಿಡಿಯೊಂದಿಗೆ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. |
| 28.05.2022 | **ಪೋಷಕರು/ ತಾಯಂದಿರ ಸಭೆ** | ಪೋಷಕರ/ ತಾಯಂದಿರ ಸಭೆ ಕರೆದು ವಾರ್ಷಿಕ ಚಟುವಟಿಕೆ ಪರಿಚಯಿಸಿ ಸಹಕಾರ ಕೋರುವುದು. |
| | **ಜೂನ್-2022** | |
| 01.06.2022 ರಿಂದ ಪ್ರಾರಂಭ | **ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಪ್ರಾರಂಭಿಸುವುದು** | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 01.06.2022 ರಿಂದ 06.06.2022 | **ಪುಸ್ತಕ ಪರಿಚಯ ಅವಧಿಗಳು** | ವಾರ್ಷಿಕ ಪಾಠ ಯೋಜನೆ/ ಕ್ರಿಯಾ ಯೋಜನೆಯನ್ನು ವಿವರಿಸಿ ಮಾಹೆವಾರು ಪರೀಕ್ಷೆ / ಮೌಲ್ಯಾಂಕನ ವಿಶ್ಲೇಷಣೆ ಸಿ.ಸಿ.ಇ. ಪಠ್ಯದಲ್ಲಿನ ಅಧ್ಯಾಯಗಳ ಮುಖ್ಯಾಂಶಗಳು, ಹಿಂದಿನ ತರಗತಿಯಲ್ಲಿನ ಕಲಿಕಾಂಶಗಳೊಂದಿಗೆ ಪ್ರಸ್ತುತ ಪಾಠಕ್ಕೆ ಹೊಂದಾಣಿಕೆ ಮಾಡಿ ನಿರ್ವಹಿಸುವುದು. ಇತರೆ ಕಾರ್ಯಕ್ರಮಗಳ ನಿರ್ವಹಣೆ ಮತ್ತು ಮಹತ್ವ, ಪಾಲ್ಗೊಳ್ಳುವಿಕೆ ಕುರಿತಾದ ಮುಖ್ಯಾಂಶಗಳನ್ನು ವಿವರಣೆ ನೀಡಿ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವುದು. (ಕೆಳಕಂಡ ಸೂಚನೆ 08 ಅನ್ನು ಗಮನಿಸಿ) |
| 06.06.2022 ರಿಂದ 08.06.2022 | **ವಿವಿಧ ಕ್ಲಬ್‌ಗಳ ರಚನೆ** | ವಿದ್ಯಾರ್ಥಿಗಳ ಪ್ರತಿಭೆಗಳನ್ನಾಧರಿಸಿ ಅವರ ಆಸಕ್ತಿ ಕ್ಷೇತ್ರ ಪರಿಚಯಿಸಿ ಶಾಲೆಯಲ್ಲಿ ವಿವಿಧ ರೀತಿಯ ಕ್ಷೇತ್ರವಾರು ಸಂಘಗಳನ್ನು /ಕ್ಲಬ್‌ಗಳನ್ನು (ಸಾಹಿತ್ಯ/ ಕ್ರೀಡಾ/ ವಿಜ್ಞಾನ/ ಕಲಾ/ ಸಾಂಸ್ಕೃತಿಕ ಕ್ಲಬ್‌ಗಳು/ ವಿದ್ಯಾರ್ಥಿಗಳ ಸಂಘಗಳು, ಇಕೋಕ್ಲಬ್, ಇತರೆ) ರಚಿಸುವುದರೊಂದಿಗೆ ವಿದ್ಯಾರ್ಥಿಗಳಿಗೆ ಜವಾಬ್ದಾರಿ ನೀಡುವುದು. |
| 27.06.2022 ರಿಂದ 28.06.2022 | **ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಆಧರಿಸಿ ಶ್ರೇಣಿಕರಿಸುವುದು.** | ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಆಧರಿಸಿ 06 ಗುಂಪುಗಳನ್ನಾಗಿಸಿ ಹಿರಿಯ ಪ್ರಾಥಮಿಕ ಶಾಲೆ/ ಪ್ರೌಢಶಾಲೆಯಲ್ಲಿ ವಿಷಯವಾರು ಶಿಕ್ಷಕರಿಗೆ ದತ್ತು ನೀಡುವುದು ಹಾಗೂ ಈ ಗುಂಪುಗಳಿಗೆ ಪ್ರತಿ ಮಾಹೆವಾರು ಸಿ.ಸಿ.ಇ ಅಡಿ ಚಟುವಟಿಕೆಗಳನ್ನು (Project Works) ಸ್ಪರ್ಧಾತ್ಮಕವಾಗಿ ನೀಡುವುದರೊಂದಿಗೆ ಆಯಾ ಮಾಹೆಯಲ್ಲಿ ನಿರ್ವಹಿಸಿದ ಬೋಧನಾಂಶಗಳ/ ಕಲಿಕಾ ಪ್ರಗತಿಯನ್ನು ಪರಿಶೀಲಿಸುವುದು. |
| 29.06.2022 ರಿಂದ 30.06.2022 | **ಸಿ.ಸಿ.ಇ ಅಡಿ ಚಟುವಟಿಕೆ-1 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಜುಲೈ-2022** | |
| 01.07.2022 ರಿಂದ ಪ್ರಾರಂಭ | **ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು** | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |



Kiran Raghupathi

| | | |
|---|---|---|
| 04.07.2022 ರಿಂದ 08.07.2022 | **ಆಪ್ತ ಸಮಾಲೋಚನೆ (ಮಕ್ಕಳ ಕೌನ್ಸಿಲಿಂಗ್) ನಿರ್ವಹಿಸುವುದು.** | ವಿದ್ಯಾರ್ಥಿಗಳಿಗೆ ತರಗತಿವಾರು ಕೌನ್ಸಿಲಿಂಗ್‌ಗೆ ಹಾಜರಾಗುವ ವೇಳಾಪಟ್ಟಿ ನಿಗದಿಪಡಿಸಿ ತಮ್ಮ ದೈನಂದಿನ ವ್ಯಾಸಂಗಕ್ಕೆ ಪೂರಕ ಸಾಮಗ್ರಿಗಳಾದ ಪಠ್ಯಪುಸ್ತಕ, ನೋಟ್ಸ್, ಮನೆಗೆಲಸ(ಹೋಂವರ್ಕ್), ಇತರೆ ಸಾಮಗ್ರಿಗಳನ್ನು ತರಗತಿ ಶಿಕ್ಷಕರಿಗೆ ತೋರಿಸುವುದು. ತರಗತಿ ಶಿಕ್ಷಕರು ಪರಿಶೀಲಿಸಿ, ಅವರ ದೈನಂದಿನ ಸ್ಟಡಿ ಟೈಂ-ಟೇಬಲ್ ಮನೆಗೆಲಸ(ಹೋಂವರ್ಕ್), ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡುವುದು(ವಿವರವನ್ನು ಚೆಕ್‌ಲಿಸ್ಟ್‌ನಂತೆ ಪ್ರತ್ಯೇಕವಾಗಿ ದಾಖಲಿಸಿಕೊಳ್ಳುವುದು). |
| 11.07.2022 ರಿಂದ 13.07.2022 | **ಹೋಬಳಿ ಮಟ್ಟದ ಕ್ರೀಡಾಕೂಟ** | ಶಾಲೆ/ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಆಯೋಜಿಸುವುದು ಹಾಗೂ ಪಾಲ್ಗೊಳ್ಳುವುದು. |
| 14.07.2022 ರಿಂದ 15.07.2022 | **ಅನುಭವ ಹಂಚಿಕೆ ಕಾರ್ಯಗಾರ** | ಮುಖ್ಯ ಶಿಕ್ಷಕರು ತಮ್ಮ ಸಮೀಪದ ಶಾಲೆಗಳ ಆಯ್ದ ವಿಷಯ ಸಂಪನ್ಮೂಲ ಶಿಕ್ಷಕರನ್ನು ಶಾಲೆಗೆ ಆಹ್ವಾನಿಸಿಕೊಂಡು ಹೊಸದಾಗಿ ನೇಮಿಸಿಕೊಂಡ ಶಿಕ್ಷಕರೊಂದಿಗೆ ಪರಸ್ಪರ ಅನುಭವ ಹಂಚಿಕೆ ಮಾಡಿಕೊಂಡು ಕ್ಲಿಷ್ಟ ಬೋಧನಾಂಶಗಳ ಕುರಿತು ಮಾರ್ಗದರ್ಶನ ಪಡೆಯುವುದು. |
| 18.07.2022 ರಿಂದ 20.07.2022 | **ಮೊದಲನೆಯ ರೂಪಣಾತ್ಮಕ ಮೌಲ್ಯಮಾಪನ(ಎಫ್.ಎ-1)** | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ವಿಷಯದ ಬೋಧನಾ ಅವಧಿಯಲ್ಲಿ ಸದರಿ ಮೌಲ್ಯಮಾಪನ ಹಮ್ಮಿಕೊಳ್ಳುವುದು. (ನಿಗದಿತ ಅವಧಿಯಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು) ನಂತರ ದೈನಂದಿನ ಪಾಠಗಳು ಮುಂದುವರೆಯುತ್ತದೆ. |
| 26.07.2022 | **ಪೋಷಕರ/ ತಾಯಂದಿರ ಸಭೆ *(OPEN HOUSE)*** | Open House- ಪೋಷಕರ/ ತಾಯಂದಿರ ಸಭೆ ಕರೆದು ವಿದ್ಯಾರ್ಥಿಗಳ ಎಫ್.ಎ-1 ಆಧರಿಸಿ ಕಲಿಕಾ ಪ್ರಗತಿ ಮತ್ತು ಆಪ್ತ ಸಮಾಲೋಚನಾಂಶಗಳನ್ನು ಚರ್ಚಿಸುವುದು ಹಾಗೂ ಉತ್ತರ ಪತ್ರಿಕೆಗಳನ್ನು/ ಪ್ರಾಜೆಕ್ಟ್ ವರ್ಕ್ಸ್‌ಗಳನ್ನು ವಿದ್ಯಾರ್ಥಿಗಳಿಗೆ ಸಮ್ಮುಖದಲ್ಲಿ ನೀಡಿ ಚರ್ಚಿಸುವುದು. |
| 29.07.2022 ರಿಂದ 30.07.2022 | **ಸಿ.ಸಿ.ಇ ಚಟುವಟಿಕೆ-2 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಆಗಸ್ಟ್-2022** | |
| 01.08.2022 ರಿಂದ ಪ್ರಾರಂಭ | **ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು** | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 15.08.2022 | **ಸ್ವಾತಂತ್ರ್ಯ ದಿನಾಚರಣೆ** | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |
| 18.08.2022 ರಿಂದ 19.08.2022 | **ತಾಲ್ಲೂಕು ಮಟ್ಟದ ಕ್ರೀಡಾಕೂಟ** | ಕಡ್ಡಾಯವಾಗಿ ನಿಗಧಿತ ದಿನಾಂಕದೊಳಗೆ ಆಯೋಜಿಸಿ ಪೂರ್ಣಗೊಳಿಸುವುದು. |
| 29.08.2022 | **ರಾಷ್ಟ್ರೀಯ ಕ್ರೀಡಾ ದಿನ** | ಪ್ರಾರ್ಥನಾ ಸಮಯವನ್ನು ಬಳಸಿಕೊಂಡು ರಾಷ್ಟ್ರೀಯ ಕ್ರೀಡಾ ದಿನದ ಮಹತ್ವ ತಿಳಿಸುವುದು. |
| 30.08.2022 | **ಸಿ.ಸಿ.ಇ ಚಟುವಟಿಕೆ-3 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ |



Kiran Raghupathi

| | | |
|---|---|---|
| | | ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| **ಸೆಪ್ಟೆಂಬರ್-2022** | | |
| 01.09.2022 ರಿಂದ ಪ್ರಾರಂಭ. | **ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು** | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 05.09.2022 | **ಶಿಕ್ಷಕರ ದಿನಾಚರಣೆ** | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು(ಸೂಚನೆ-5 ಅನ್ನು ಗಮನಿಸಿ). |
| 08.09.2022 | **ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ** | ರಾಷ್ಟ್ರ ಮತ್ತು ರಾಜ್ಯ ಹಂತದ ಸಾಕ್ಷರತಾ ಪ್ರಮಾಣದ ಬಗ್ಗೆ ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವ ಮೂಲಕ ಸಾಕ್ಷರತೆಯ ಮಹತ್ವದ ಬಗ್ಗೆ ಅರಿವು ಮೂಡಿಸುವುದು.<br>ವಿದ್ಯಾರ್ಥಿಗಳಿಂದ ಅನಕ್ಷರಸ್ತರನ್ನು ಸಾಕ್ಷರಸ್ತರನ್ನಾಗಿ ಮಾಡುವುದು. |
| 15.09.2022 | **ಸರ್.ಎಂ.ವಿಶ್ವೇಶ್ವರಯ್ಯ ರವರ ದಿನಾಚರಣೆ** | ವಿಶ್ವೇಶ್ವರಯ್ಯನವರು ನಾಡಿಗೆ ನೀಡಿದ ಕೊಡುಗೆ ಹಾಗೂ ಅವರ ವ್ಯಕ್ತಿತ್ವದ ಬಗ್ಗೆ ಮಕ್ಕಳಿಗೆ ತಿಳಿಸುವುದು. |
| 22.09.2022 ರಿಂದ 24.09.2022 | **ಎರಡನೆಯ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ-2)** | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಬೋಧನಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. ನಿಗದಿತ ಅವಧಿಯಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು. |
| 30.09.2022 | **ಸಿ.ಸಿ.ಇ ಚಟುವಟಿಕೆ-4 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| **ಅಕ್ಟೋಬರ್-2022** | | |
| 01.10.2022 ರಿಂದ ಪ್ರಾರಂಭ. | **ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು** | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 02.10.2022 | **ಮಹಾತ್ಮ ಗಾಂಧಿ ಜಯಂತಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಜಯಂತಿ** | ಮಹಾತ್ಮ ಗಾಂಧಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರ ಸರಳ ಜೀವನದ ಪರಿಚಯ, ಶ್ರಮದಾನ ಹಾಗೂ ಭಜನೆ ಮೂಲಕ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು. |
| 03.10.2022 ರಿಂದ 16.10.2022 | **ದಸರಾ ರಜೆ** | ಅರ್ಧವಾರ್ಷಿಕಪರೀಕ್ಷೆಗೆ (ಎಸ್.ಎ-1 ಪೂರ್ವ ತಯಾರಿಗಾಗಿ) ಅಧ್ಯಯನ ಮಾಡಿಕೊಳ್ಳಲು ಸೂಚಿಸಿ, ದಿನಾಂಕ:03.10.2022 ರಿಂದ 16.10.2022 ರವರೆಗೆ ದಸರಾ ರಜೆ ನೀಡುವುದು. |
| 17.10.2022 ರಿಂದ 25.11.2022 | **ಅರ್ಧ ವಾರ್ಷಿಕ ಪರೀಕ್ಷೆ/ ಸಂಕಲನಾತ್ಮಕ ಮೌಲ್ಯಮಾಪನ-1 (ಎಸ್.ಎ-1)** | 4 ರಿಂದ 9ನೇ ತರಗತಿಗಳಿಗೆ ಅರ್ಧ ವಾರ್ಷಿಕ ಪರೀಕ್ಷೆ/ ಸಂಕಲನಾತ್ಮಕ ಮೌಲ್ಯಮಾಪನ(ಎಸ್.ಎ-1) ನಿರ್ವಹಿಸಿ ಮೌಲ್ಯಾಂಕನ ವಿಶ್ಲೇಷಣೆ ಮಾಡಿ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪ್ರಸ್ತುತ ಪಡಿಸುವುದು. |
| 28.10.2022 | **ಜಿಲ್ಲಾ ಮಟ್ಟದ ಕ್ರೀಡಾ ಕೂಟ** | ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು. |



Kiran Raghupathi

| | | |
|---|---|---|
| 29.10.2022<br><br><br><br><br>31.10.2022 | ಸಮುದಾಯದತ್ತ ಶಾಲೆ (ತಾಯಂದಿರ / ಪೋಷಕರ ಸಭೆ)<br>[ಪ್ರಾಥಮಿಕ ಶಾಲಾ ವಿಭಾಗ]<br><br>ಸಮುದಾಯದತ್ತ ಶಾಲೆ (ತಾಯಂದಿರ / ಪೋಷಕರ ಸಭೆ)<br>[ಪ್ರೌಢ ಶಾಲಾ ವಿಭಾಗ] | 1. ಸಂಕಲನಾತ್ಮಕ ಮೌಲ್ಯಮಾಪನ ಫಲಿತಾಂಶವನ್ನು ಸಿದ್ಧಪಡಿಸಿಕೊಳ್ಳುವುದು.<br>2. ಶಾಲೆಯ ಪ್ರತಿ ವಿದ್ಯಾರ್ಥಿಯ ಕೃತಿ ಸಂಪುಟ (Child Profile)ವನ್ನು ಸಿದ್ಧಪಡಿಸಿಕೊಳ್ಳುವುದು.<br>3. ಮುಖ್ಯ ಶಿಕ್ಷಕರು ಸಮುದಾಯದತ್ತ ಶಾಲೆ ದಿನಾಂಕದ ಬಗ್ಗೆ ಹಾಗೂ ಕಾರ್ಯಕ್ರಮಕ್ಕೆ ಹಾಜರಾಗುವಂತೆ ಎಸ್.ಡಿ.ಎಂ.ಸಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಸಾಕಷ್ಟು ಮುಂಚಿತವಾಗಿ ಜ್ಞಾಪನವನ್ನು ನೀಡುವುದು.<br>4. ಆಯಾ ತರಗತಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪೋಷಕರ ಮನವೊಲಿಸಿ ತಪ್ಪದೇ ಸಮುದಾಯದತ್ತ ಶಾಲೆ ಕಾರ್ಯಕ್ರಮಕ್ಕೆ ಹಾಜರಾಗಲು ಪ್ರೇರೇಪಿಸುವುದು.<br>5. ಶಿಕ್ಷಕರು, ಪೋಷಕರಿಗೆ ಮಕ್ಕಳ ಕೃತಿ ಸಂಪುಟವನ್ನು ತೋರಿಸಿ, ಅವರ ಕಲಿಕಾ ಪ್ರಗತಿಯನ್ನು ವಿವರಿಸುವುದು. ಮನೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಲಿಕಾ ಪರಿಸರವನ್ನು ಒದಗಿಸಿಕೊಡುವಂತೆ ತಿಳಿಸುವುದು.<br>6. ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಎಸ್.ಡಿ.ಎಂ.ಸಿ ಸಮ್ಮುಖದಲ್ಲಿ ಶಾಲೆಯ ವಿದ್ಯಾರ್ಥಿಗಳ ಒಟ್ಟಾರೆ ಫಲಿತಾಂಶದ ಬಗ್ಗೆ ಚರ್ಚಿಸುವುದು. ಫಲಿತಾಂಶವನ್ನು ಆಧರಿಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವುದು.<br>7. ವಿಶೇಷವಾಗಿ ಹತ್ತನೆ ತರಗತಿಗೆ ಸಂಬಂಧಿಸಿದಂತೆ ಎಲ್ಲಾ ಮಕ್ಕಳ ಪೋಷಕರು ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು ಈ ಪೋಷಕರ ಪ್ರತ್ಯೇಕ ಸಭೆ ನಡೆಸಿ ಮಕ್ಕಳ ಕಲಿಕೆಗೆ ಪೂರಕವಾದ ಕಲಿಕಾ ವಾತಾವರಣ ಮನೆಯಲ್ಲಿ ನೀಡುವಂತೆ ಮನವೊಲಿಸುವುದು, ಸೂಕ್ತ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕ ಅವಧಿ ನಿರ್ವಹಣೆ. |
| 31.10.2022 | ರಾಷ್ಟ್ರೀಯ ಸಂಕಲ್ಪ ದಿನ | ಇಲಾಖಾ ಮಾರ್ಗಸೂಚಿಯಂತೆ ಕ್ರಮವಹಿಸುವುದು. |
| | **ನವೆಂಬರ್-2022** | |
| 01.11.2022 | ಕನ್ನಡ ರಾಜ್ಯೋತ್ಸವ | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು |
| 01.11.2022 ರಿಂದ ಪ್ರಾರಂಭ. | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 04.11.2022 ರಿಂದ 05.11.2022 | ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ | ಶಾಲೆ/ಕ್ಲಸ್ಟರ್ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಮತ್ತು ಪಾಲ್ಗೊಳ್ಳುವುದು. |
| 10.11.2022 | ರಾಜ್ಯಮಟ್ಟದ ಕ್ರೀಡಾಕೂಟ | ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು. |
| 11.11.2022 | ರಾಷ್ಟ್ರೀಯ ಶಿಕ್ಷಣ ದಿನ/ ಕನಕದಾಸ ಜಯಂತಿ | ಮೌಲಾನಾ ಅಬುಲ್ ಕಲಾಂ ಆಜಾದ್ ಜಯಂತಿ ಆಚರಣೆ ಹಾಗೂ ಕನಕದಾಸ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವುದು |
| 14.11.2022 | ಮಕ್ಕಳ ದಿನಾಚರಣೆ | ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಹಾಗೂ ಮಕ್ಕಳ ಅಭಿವ್ಯಕ್ತಿ ಹಾಗೂ ಭಾಗವಹಿಸುವಿಕೆಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. |
| 19.11.2022 | ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ | ಅರ್ಥಪೂರ್ಣವಾಗಿ ಅಚರಿಸುವುದು |
| 26.11.2022 | ಸಂವಿಧಾನ ದಿನಾಚರಣೆ | ಸಂವಿಧಾನದ ಪ್ರಾಮುಖ್ಯತೆ ಮತ್ತು ನಾಗರೀಕರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು. |



Kiran Raghupathi

| | | |
|---|---|---|
| 28.11.2022 | ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ | ತಾಲ್ಲೂಕು ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಮತ್ತು ಪಾಲ್ಗೊಳ್ಳುವುದು. |
| 30.11.2022 | ಸಿ.ಸಿ.ಇ ಚಟುವಟಿಕೆ-5 ನಿರ್ವಹಿಸುವುದು. | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| **ಡಿಸೆಂಬರ್-2022** | | |
| 01.12.2022 ರಿಂದ ಪ್ರಾರಂಭ. | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 01.12.2022 | ವಿಶ್ವ ಏಡ್ಸ್ ದಿನಾಚರಣೆ | ವಿಶ್ವ ಏಡ್ಸ್ ದಿನಾಚರಣೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು |
| 03.12.2022 | ವಿಶ್ವ ವಿಕಲಚೇತನರ ದಿನಾಚರಣೆ | ಸಮನ್ವಯ ಶಿಕ್ಷಣ ಪರಿಕಲ್ಪನೆಯ ಅರಿವು ಮೂಡಿಸುವುದು. |
| 12.12.2022 ರಿಂದ 13.12.2022 | ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮ | ಜಿಲ್ಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಹಾಗೂ ತಾಲ್ಲೂಕು ಹಂತದಲ್ಲಿ ಅರ್ಹ/ ಆಯ್ಕೆಯಾದ ವಿದ್ಯಾರ್ಥಿಗಳು ಪಾಲ್ಗೊಳ್ಳುವುದು. |
| 22.12.2022 | ರಾಷ್ಟ್ರೀಯ ಗಣಿತ ದಿನ | ಮೆಟ್ರಿಕ್ ಮೇಳ, ನಿತ್ಯ ಜೀವನದಲ್ಲಿ ಗಣಿತದ ಬಳಕೆ, ಗಣಿತ ಕ್ಷೇತ್ರಕ್ಕೆ ಭಾರತೀಯರ ಕೊಡುಗೆ ಇವೆ ಮುಂತಾದ ವಿಷಯಗಳ ಬಗ್ಗೆ ವಿಚಾರಗೋಷ್ಠಿ, ಚರ್ಚಾಸ್ಪರ್ಧೆಗಳನ್ನು ಶಾಲೆಯಲ್ಲಿ ಏರ್ಪಡಿಸಿ ಈ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು. |
| 24.12.2022 | ಅಣಕು ಸಂಸತ್ತು ಸ್ಪರ್ಧೆ ಸಿ.ಸಿ.ಇ | ಅಣಕು ಸಂಸತ್ತಿನ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ನಿಟ್ಟಿನಲ್ಲಿ ಶಾಲಾ ಹಂತದಲ್ಲಿ ಅಣುಕು ಸಂಸತ್ತು ಸ್ಪರ್ಧೆ ಏರ್ಪಡಿಸುವುದು. |
| 26.12.2022 ರಿಂದ 28.12.2022 | ಮೂರನೇ ರೂಪಣಾತ್ಮಕ ಮೌಲ್ಯಮಾಪನ(ಎಫ್.ಎ-3) | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಬೋಧನಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. |
| 30.12.2022 | ಸಿ.ಸಿ.ಇ ಚಟುವಟಿಕೆ-6 ನಿರ್ವಹಿಸುವುದು. | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| **ಜನವರಿ-2023** | | |
| 01.01.2023 ರಿಂದ ಪ್ರಾರಂಭ. | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಪ್ರಸ್ತುತ ಮಾಹೆಯ ಪಠ್ಯವಸ್ತು ಬೋಧನೆ ಮುಂದುವರೆಸುವುದು | ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಕಲಿಕಾ ಕೊರತೆಯನ್ನು ಸರಿದೂಗಿಸಲು ಡಿ.ಎಸ್.ಇ.ಆರ್.ಟಿ ಕಛೇರಿಯಿಂದ ಪೂರೈಸಿದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಮಾಹೆಯ ತರಗತಿವಾರು / ವಿಷಯವಾರು ಪಠ್ಯವಸ್ತುವಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. |
| 03.01.2023 | ಮಾತೆ ಸಾವಿತ್ರಿ ಬಾಯಿ ಫುಲೆ ಜಯಂತಿ | ದೇಶದ ಮೊದಲ ಮಹಿಳಾ ಶಿಕ್ಷಕಿ ಮಾತೆ ಸಾವಿತ್ರಿ ಬಾಯಿ ಫುಲೆಯವರ ಬಗ್ಗೆ ಮಕ್ಕಳಿಗೆ ತಿಳಿಸುವುದು. |



Kiran Raghupathi

| | | |
|---|---|---|
| 05.01.2023 ರಿಂದ 06.01.2023 | ಅನುಭವ ಹಂಚಿಕೆ ಕಾರ್ಯಗಾರ | ಸಮೀಪದ ಶಾಲೆಗಳ ಆಯ್ದ ವಿಷಯ ಸಂಪನ್ಮೂಲ ಶಿಕ್ಷಕರನ್ನು ಶಾಲೆಗೆ ಆಹ್ವಾನಿಸಿ ಹೊಸದಾಗಿ ನೇಮಿಸಿಕೊಂಡ ಶಿಕ್ಷಕರೊಂದಿಗೆ ಪರಸ್ಪರ ಅನುಭವ ಹಂಚಿಕೊಂಡು ಬೋಧನೆಗಳ ಕುರಿತು ಮಾರ್ಗದರ್ಶನ ನೀಡುವುದು. |
| 12.01.2023 | ಸ್ವಾಮಿವಿವೇಕಾನಂದರ ಜನ್ಮ ದಿನಾಚರಣೆ, ರಾಷ್ಟ್ರೀಯ ಯುವ ದಿನಾಚರಣೆ | ದೇಶದ ಅಭಿವೃದ್ಧಿಯಲ್ಲಿ ಯುವಪೀಳಿಗೆಯ ಪಾತ್ರದ ಮಹತ್ವದ ಬಗ್ಗೆ ತಿಳಿಸುವುದು. |
| 25.01.2023 | ರಾಷ್ಟ್ರೀಯ ಮತದಾರರ ದಿನ | ಇ.ಎಲ್.ಸಿ ಕ್ಲಬ್‌ಗಳ ಮೂಲಕ ಮತದಾನದ ಮಹತ್ವದ ಬಗ್ಗೆ ತಿಳಿಸುವುದು. |
| 26.01.2023 | ಗಣರಾಜ್ಯ ದಿನಾಚರಣೆ | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |
| 30.01.2023 | ಹುತಾತ್ಮರ ದಿನಾಚಾರಣೆ ಹಾಗೂ ಪೋಷಕರ ಸಭೆ | ಮಹಾತ್ಮ ಗಾಂಧೀಜಿಯವರ ಉದಾತ್ತ ಧ್ಯೇಯದ ಬಗ್ಗೆ ತಿಳಿಸುವುದು ಹಾಗೂ ಪೋಷಕರ/ ತಾಯಂದಿರ ಸಭೆ ಕರೆದು ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಮತ್ತು ಆಪ್ತ ಸಮಾಲೋಚನಾಂಶಗಳನ್ನು ಚರ್ಚಿಸುವುದು ಹಾಗೂ ಉತ್ತರ ಪತ್ರಿಕಗಳನ್ನು/ ಪ್ರಾಜೆಕ್ಟ್ ವರ್ಕ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು. |
| 31.01.2023 | ಸಿ.ಸಿ.ಇ ಚಟುವಟಿಕೆ–7 ನಿರ್ವಹಿಸುವುದು. | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| **ಫೆಬ್ರವರಿ–2023** | | |
| 01.02.2023 ರಿಂದ ಪ್ರಾರಂಭ. | ಪುನರಾವರ್ತನೆ. | ಶೈಕ್ಷಣಿಕ ವರ್ಷದಲ್ಲಿ ಪೂರ್ಣಗೊಂಡ ಪಠ್ಯವಸ್ತುವಿನ ಪುನರಾವರ್ತನೆ ಮಾಡುವುದರೊಂದಿಗೆ ವಿದ್ಯಾರ್ಥಿಗಳನ್ನು ವಾರ್ಷಿಕ ಪರೀಕ್ಷೆಗೆ ಸಿದ್ಧಪಡಿಸುವುದು. |
| 04.02.2023 ರಿಂದ 06.02.2023 | ನಾಲ್ಕನೆಯ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ–4) | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಬೋಧನಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. |
| 20.02.2023 ರಿಂದ 25.02.2023 | ಪೂರ್ವಭಾವಿ ಪರೀಕ್ಷೆ. (Preparatory Exam ) | ಈವರೆಗೆ ಪೂರ್ಣಗೊಂಡಿರುವ ಪಠ್ಯವಸ್ತುವನ್ನಾಧರಿಸಿ ವಾರ್ಷಿಕ ಪರೀಕ್ಷೆಗೆ ಪೂರ್ವ ತಯಾರಿಗಾಗಿ ಪೂರ್ವಭಾವಿ ಪರೀಕ್ಷೆಯನ್ನು (Preparatory Exam) ನಿರ್ವಹಿಸುವುದು. |
| 27.02.2023 | ಸಿ.ಸಿ.ಇ ಚಟುವಟಿಕೆ–8 ನಿರ್ವಹಿಸುವುದು. | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| 28.02.2023 | ರಾಷ್ಟ್ರೀಯ ವಿಜ್ಞಾನ ದಿನಾಚರಣೆ | ಸರ್. ಸಿ.ವಿ.ರಾಮನ್‌ರವರನ್ನು ಒಳಗೊಂಡಂತೆ ಭಾರತದ ವಿಜ್ಞಾನಿಗಳು ವಿಜ್ಞಾನ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು. ಈ ದಿನದಂದು ಶಾಲೆಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ವಿಜ್ಞಾನದ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವುದು. |
| **ಮಾರ್ಚ್–2023** | | |
| 01.03.2023 ರಿಂದ 20.03.2023 | ಪುನರಾವರ್ತನೆ. | ಶೈಕ್ಷಣಿಕ ವರ್ಷದಲ್ಲಿ ಪೂರ್ಣಗೊಂಡ ಪಠ್ಯವಸ್ತುವಿನ ಪುನರಾವರ್ತನೆ ಮಾಡುವುದರೊಂದಿಗೆ ವಿದ್ಯಾರ್ಥಿಗಳನ್ನು ವಾರ್ಷಿಕ ಪರೀಕ್ಷೆಗೆ ಸಿದ್ಧಪಡಿಸುವುದು. |
| 08.03.2023 | ವಿಶ್ವ ಮಹಿಳಾ ದಿನಾಚರಣೆ | ಅರ್ಥಪೂರ್ಣವಾಗಿ ಆಚರಿಸುವುದು |



Kiran Raghupathi

| | | |
|---|---|---|
| 23.03.2023 ರಿಂದ 31.03.2023 | ವಾರ್ಷಿಕ ಪರೀಕ್ಷೆ | 4 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ನಡೆಸುವುದು |
| ಏಪ್ರಿಲ್-2023 | | |
| 01.04.2023 ರಿಂದ 05.04.2023 | ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನ | 1 ರಿಂದ 9 ನೇ ತರಗತಿಯವರೆಗೆ ಮಾರ್ಗಸೂಚಿಯಂತೆ ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನ ಪೂರ್ಣಗೊಳಿಸಿ ಸಮುದಾಯದತ್ತ ಶಾಲೆ ವೇಳೆಗೆ ಸಂಬಂಧಿಸಿದ ಶೈಕ್ಷಣಿಕ ಪ್ರಗತಿ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳುವುದು. |
| 07.04.2023 | ವಿಶ್ವ ಆರೋಗ್ಯದ ದಿನಾಚರಣೆ | ಅರ್ಥಪೂರ್ಣವಾಗಿ ಆಚರಿಸುವುದು. |
| 08.04.2023 | ಎರಡನೆಯ ಸಮುದಾಯದತ್ತ ಶಾಲೆ (ಪ್ರಾಥಮಿಕ ಶಾಲಾ ವಿಭಾಗ) | 1. ಮಕ್ಕಳ ಫಲಿತಾಂಶ ಪ್ರಕ್ರಟಿಸುವುದು.<br>2. ಮುಂದಿನ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳು ಶಾಲಾ ಪ್ರಾರಂಭದ ದಿನದಿಂದಲೇ ಹಾಜರಾಗುವಂತೆ ಪ್ರೇರೇಪಿಸುವುದು.<br>3. ಶಾಲಾ ಪ್ರಾರಂಭದ ದಿನದಿಂದಲೇ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾಗುವ ಬಗ್ಗೆ ಪೋಷಕರಿಗೆ ತಿಳಿಸುವುದು.<br>4. ರಜೆ ಅವಧಿಯಲ್ಲಿ ದಾಖಲಾತಿ ಪ್ರಕ್ರಿಯೆ ನಡೆಯುವ ಬಗ್ಗೆ ತಿಳಿಸುವುದು.<br>5. ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವುದು, ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು, ಶಾಲಾ ಶೈಕ್ಷಣಿಕ ಯೋಜನೆಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದೊಂದು ಎಸ್.ಡಿ.ಎಂ.ಸಿ.ಸಭೆಯಲ್ಲಿ ಮಂಡಿಸಿ, ಒಪ್ಪಿಗೆ ಪಡೆಯುವುದು. |
| 10.04.2023 | ಎರಡನೆಯ ಸಮುದಾಯದತ್ತ ಶಾಲೆ (ಪ್ರೌಢಶಾಲಾ ವಿಭಾಗ) | 1. ಮಕ್ಕಳ ಫಲಿತಾಂಶ ಪ್ರಕ್ರಟಿಸುವುದು.<br>2. ಮುಂದಿನ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳು ಶಾಲಾ ಪ್ರಾರಂಭದ ದಿನದಿಂದಲೇ ಹಾಜರಾಗುವಂತೆ ಪ್ರೇರೇಪಿಸುವುದು.<br>3. ಶಾಲಾ ಪ್ರಾರಂಭದ ದಿನದಿಂದಲೇ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾಗುವ ಬಗ್ಗೆ ಪೋಷಕರಿಗೆ ತಿಳಿಸುವುದು.<br>4. ರಜೆ ಅವಧಿಯಲ್ಲಿ ದಾಖಲಾತಿ ಪ್ರಕ್ರಿಯೆ ನಡೆಯುವ ಬಗ್ಗೆ ತಿಳಿಸುವುದು.<br>5. ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವುದು, ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು, ಶಾಲಾ ಶೈಕ್ಷಣಿಕ ಯೋಜನೆಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದಂದು ಎಸ್.ಡಿ.ಎಂ.ಸಿ.ಸಭೆಯಲ್ಲಿ ಮಂಡಿಸಿ, ಒಪ್ಪಿಗೆ ಪಡೆಯುವುದು. |
| 14.04.2023 | ಡಾ\|\|ಬಿ.ಆರ್.ಅಂಬೇಡ್ಕರ್ ಜಯಂತಿ | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |
| ದಿನಾಂಕ: 11.04.2023 ರಿಂದ ದಿನಾಂಕ:28.05.2023 ರವರೆಗೆ ಬೇಸಿಗೆ ರಜೆ | | |

## ಶಾಲೆಗಳ ದೈನಂದಿನ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆಗೆ ಸಲಹಾತ್ಮಕ ವೇಳಾ ಪಟ್ಟಿ

ಸರ್ಕಾರಿ / ಅನುದಾನಿತ / ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬೆಳಗ್ಗೆ 9.30 ಕ್ಕೆ ಹಾಜರಾಗುವುದು ಹಾಗೂ 9.40 ರವರೆಗೆ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವುದು, 9.40 ರಿಂದ 9.50 ರವರೆಗೆ ಪ್ರಾರ್ಥನೆ, 9.50 ರಿಂದ 10.00 ರವರೆಗೆ ಕ್ಷೀರ ಭಾಗ್ಯ ಯೋಜನೆಯಡಿ ಬಿಸಿ ಹಾಲನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ನಂತರ ದೈನಂದಿನ ಬೋಧನಾ ತರಗತಿಗಳನ್ನು ಕೆಳಕಂಡಂತೆ ಪ್ರಾರಂಭಿಸುವುದು.



Kiran Raghupathi

## ಪ್ರಾಥಮಿಕ ಶಾಲೆಗಳು (1 ರಿಂದ 7/8 ನೇ ತರಗತಿಗಳ)

| ಅವಧಿ-1 | ಅವಧಿ-2 | ಅಲ್ಪ ವಿರಾಮ | ಅವಧಿ-3 | ಅವಧಿ-4 | ಭೋಜನ ವಿರಾಮ | ಅವಧಿ-5 | ಅವಧಿ-6 | ಅಲ್ಪ ವಿರಾಮ | ಅವಧಿ-7 | ಅವಧಿ-8 |
|---|---|---|---|---|---|---|---|---|---|---|
| 10.00 ರಿಂದ 10.40 | 10.40 ರಿಂದ 11.20 | 11.20 ರಿಂದ 11.30 | 11.30 ರಿಂದ 12.10 | 12.10 ರಿಂದ 12.50 | 12.50 ರಿಂದ 1.30 | 1.30 ರಿಂದ 2.10 | 2.10 ರಿಂದ 2.50 | 2.50 ರಿಂದ 3.00 | 3.00 ರಿಂದ 3.40 | 3.40 ರಿಂದ 4.20 |

- ನಲಿ-ಕಲಿ ತರಗತಿಗಳಲ್ಲಿ (1-3) ಪ್ರತಿದಿನ ತಲಾ 80 ನಿಮಿಷದ 04 ಅವಧಿಗಳನ್ನು ಮೇಲ್ಕಂಡ ವೇಳಾಪಟ್ಟಿಯಂತೆ ನಿರ್ವಹಿಸುವುದು.

## ಪ್ರೌಢ ಶಾಲೆಗಳು (8 ರಿಂದ 10 ನೇ ತರಗತಿಗಳ)

| ಅವಧಿ-1 | ಅವಧಿ-2 | ಅಲ್ಪ ವಿರಾಮ | ಅವಧಿ-3 | ಅವಧಿ-4 | ಭೋಜನ ವಿರಾಮ | ಅವಧಿ-5 | ಅವಧಿ-6 | ಅಲ್ಪ ವಿರಾಮ | ಅವಧಿ-7 |
|---|---|---|---|---|---|---|---|---|---|
| 10.00 ರಿಂದ 10.45 | 10.45 ರಿಂದ 11.30 | 11.30 ರಿಂದ 11.40 | 11.40 ರಿಂದ 12.25 | 12.25 ರಿಂದ 1.10 | 1.10 ರಿಂದ 1.55 | 1.55 ರಿಂದ 2.40 | 2.40 ರಿಂದ 3.25 | 3.25 ರಿಂದ 3.35 | 3.35 ರಿಂದ 4.20 |

***ಸೂಚನೆಗಳು:***

*01.* **ಕಲಿಕಾಚೇತರಿಕೆ/ಸೇತುಬಂಧ:-** 2022-23 ನೇ ಸಾಲಿನ ವಾರ್ಷಿಕ ಕಾರ್ಯಸೂಚಿಯನ್ನು ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಗರಿಷ್ಠ ಕಲಿಕಾ ಅವಕಾಶದ ಸಮಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು 1-9 ನೇ ತರಗತಿಯವರೆಗೆ ಸಿದ್ಧಪಡಿಸಿದೆ. 10 ನೇ ತರಗತಿಗೆ ಪ್ರತಿ ವರ್ಷದಂತೆ ಶಾಲೆ ಪ್ರಾರಂಭದಿಂದ 1 ತಿಂಗಳು (ಅಂದರೆ ದಿನಾಂಕ: 16.05.2022 ರಿಂದ 15.06.2022 ರವರೆಗೆ) ಸೇತುಬಂಧ ಶಿಕ್ಷಣ ಕಾರ್ಯಕ್ರಮ ಮುಂದುವರೆಸಿ ನಂತರ ನಿಗದಿತ ವೇಳಾ ಪಟ್ಟಿಯಂತೆ ಬೋಧನಾ ಕಲಿಕಾ ಚಟುವಟಿಕೆಗಳನ್ನು ನಿರ್ವಹಿಸುವುದು. ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಹಾಗೂ ಶಾಲಾ ಆಡಳಿತ ಮಂಡಳಿರವರುಗಳು ಹಾಗೂ ಉಸ್ತುವಾರಿ ಅಧಿಕಾರಿಗಳು & ಸಿಬ್ಬಂದಿಗಳು ಇದನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸುವುದು.

*02.* **ಶಾಲಾ ಹಂತದ ಚಟುವಟಿಕೆಗಳು:-** ಶಾಲೆಗಳಲ್ಲಿನ ವಿವಿಧ ಸಂಘಗಳ/ಕ್ಲಬ್‌ಗಳ ಅಡಿಯಲ್ಲಿ ಹಮ್ಮಿಕೊಳ್ಳುವಂತ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಕಲಿಕಾ ಅವಧಿಗೆ ಚ್ಯುತಿ ಬಾರದಂತೆ ಎಚ್ಚರಿಕೆಯಿಂದ ಅನುಷ್ಠಾನಗೊಳಿಸುವುದು ಹಾಗೂ ಕಾಲಕಾಲಕ್ಕೆ ಇಲಾಖೆಯಿಂದ ಹೊರಡಿಸಲಾಗುವ ಅನುಮತಿ / ಆದೇಶ / ಸುತ್ತೋಲೆ ಗಮನಿಸಿ ಮುಂದುವರೆಯುವುದು.

*03.* **ವಿವಿಧ ಆಚರಣೆಗಳು:-** 2022-23ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಆಚರಿಸಬೇಕಾದ ದಿನಾಚರಣೆಗಳು ಸರ್ಕಾರಿ ರಜೆ/ಭಾನುವಾರಗಳಾದಲ್ಲಿ ಅಥವಾ ಅಧಿಕೃತವಾಗಿ ಸರ್ಕಾರದಿಂದ ರಜೆ ಘೋಷಣೆಯಾದಲ್ಲಿ ಅಂತಹ ಆಚರಣೆಗಳನ್ನು ನಂತರದ ದಿನಗಳಲ್ಲಿ ಶಾಲಾ ಮಕ್ಕಳಿಗೆ ಅಂತಹ ಆಚರಣೆಗಳ ಪ್ರಾಮುಖ್ಯತೆ ತಿಳಿಸುವುದರ ಮೂಲಕ ಆಚರಿಸುವುದು ಹಾಗೂ ನಿಗದಿಪಡಿಸಿದ ಪರೀಕ್ಷೆಗಳು / ಚಟುವಟಿಕೆಗಳು ನಿರ್ವಹಣೆಗೆ ಸರ್ಕಾರಿ ರಜೆ / ಭಾನುವಾರಗಳಾದಲ್ಲಿ ಮುಂದಿನ ದಿನಗಳಲ್ಲಿ ನಿರ್ವಹಿಸುವುದು. ಇಂತಹ ವಿವಿಧ ದಿನಾಚರಣೆಗಳ ಆಚರಣೆಯನ್ನು ಪ್ರಾರ್ಥನಾ ಸಮಯದಲ್ಲಿ ಅದರ ಮಹತ್ವವನ್ನು ತಿಳಿಸುವುದರೊಂದಿಗೆ ಆಚರಿಸುವುದು. ಅವಶ್ಯಕತೆ ಇದ್ದಲ್ಲಿ ಆಯಾ ವಿಷಯಗಳ ಬೋಧನಾ ಅವಧಿಯಲ್ಲಿ ಸಹ ಸಂಬಂಧ ಕಲ್ಪಿಸಿ ಹೆಚ್ಚಿನ ಮಾಹಿತಿ ತಿಳಿಸುವುದು ಹಾಗೂ ಇದಕ್ಕಾಗಿ ಇಡೀ ದಿನ ಬಳಸದಂತೆ ಎಚ್ಚರಿಕೆ ವಹಿಸುವುದು.

*04.* **ಮೌಲ್ಯಾಂಕನ ವಿಶ್ಲೇಷಣೆ:-**ರೂಪಣಾತ್ಮಕ ಮೌಲ್ಯಮಾಪನವನ್ನು ಆಯಾ ವಿಷಯ ಬೋಧನೆ ಅವಧಿಯಲ್ಲಿ ದಿನಕ್ಕೊಂದು/ ದಿನಕ್ಕೆರಡು (ಬೆಳಿಗ್ಗೆ/ಮಧ್ಯಾಹ್ನದ ಅವಧಿಯಲ್ಲಿ) ವಿಷಯದಂತೆ ನಿರ್ವಹಿಸಿ ದೈನಂದಿನ ಬೋಧನಾ ಕಾರ್ಯಗಳನ್ನು ಮುಂದುವರೆಸುವುದು. ಸಂಕಲನಾತ್ಮಕ ಮೌಲ್ಯಮಾಪನವನ್ನು ಮಾತ್ರ ನಿಗಧಿತ ದಿನಗಳಂದು ಕಡ್ಡಾಯವಾಗಿ ದಿನಕ್ಕೆರಡು ವಿಷಯದಂತೆ ನಡೆಸುವುದು. ಮೌಲ್ಯಮಾಪನ ದಿನಗಳ ಸಮರ್ಪಕ ನಿರ್ವಹಣೆ ಆಗುವಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.

*05.* **ಶಿಕ್ಷಕರ ದಿನಾಚರಣೆ:-** ಶಿಕ್ಷಕರ ದಿನಾಚರಣೆಯನ್ನು ವಿವಿಧ ಹಂತಗಳಲ್ಲಿ ಬೇರೆ ಬೇರೆ ದಿನಾಂಕಗಳಂದು ನಡೆಸುತ್ತಿರುವುದರಿಂದ ಕಲಿಕಾ ದಿನಗಳು ಕಡಿಮೆಯಾಗಿರುವುದನ್ನು ಗಮನಿಸಿದೆ. ಈ ಹಿನ್ನಲೆಯಲ್ಲಿ ಇದನ್ನು ಅದೇ ದಿನ ಅಂದರೆ ದಿನಾಂಕ:05.09.2022 ರಂದು ಎಲ್ಲಾ ಹಂತಗಳಲ್ಲೂ (ಬೆಳಿಗ್ಗೆ ಶಾಲೆಗಳಲ್ಲಿ 8 ರಿಂದ 10



Kiran Raghupathi

ಗಂಟೆ ನಂತರ ಶಾಲೆ/ ತಾಲ್ಲೂಕು/ ಜಿಲ್ಲಾ/ ರಾಜ್ಯ ಹಂತಗಳಲ್ಲಿ) ಆಚರಿಸಲು ಸಂಬಂಧ ಪಟ್ಟವರು ಕ್ರಮವಹಿಸುವುದು.

*06.* **ಚಟುವಟಿಕೆ ಬ್ಯಾಂಕ್**:-ಪ್ರತಿ ಶನಿವಾರದಂದು ಅಥವಾ ಎರಡನೇ ಮತ್ತು ನಾಲ್ಕನೆಯ ಶನಿವಾರಗಳಂದು ಸಿ.ಸಿ.ಇ ಚಟುವಟಿಕೆಗಳನ್ನು ಸಂಘಟಿಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿನ ಪ್ರತಿಭಾ ಪ್ರದರ್ಶನಕ್ಕೆ (Talent Exposure) ಅವಕಾಶ ನೀಡಿ ಪ್ರೋತ್ಸಾಹಿಸುವುದರೊಂದಿಗೆ ವಿದ್ಯಾರ್ಥಿಗಳನ್ನು ಕ್ರಿಯಾಶೀಲ ಕಲಿಕಾ ಆಸಕ್ತರನ್ನಾಗಿ ಮಾಡುವುದು. ಈ ಚಟುವಟಿಕೆಗಳು ಮನರಂಜನಾ ಕಾರ್ಯಕ್ರಮಗಳಾಗದೆ ಸಂಪೂರ್ಣವಾಗಿ ಪಠ್ಯಾಧಾರಿತ ಚಟುವಟಿಕೆಗಳಾಗಿದ್ದು ಫಲಿತಾಂಶಮುಖಿ ಕಾರ್ಯಕ್ರಮಗಳಾಗಿದೆ. ಈ ಚಟುವಟಿಕೆಗಳನ್ನು ಸಿ.ಸಿ.ಇ ಅಡಿ ನಿರ್ವಹಿಸಿ ಮೌಲ್ಯಂಕನ ವಿಶ್ಲೇಷಣೆ ಮಾಡಿ ಫಲಿತಾಂಶ ಶ್ರೇಣೀಕರಣಕ್ಕೆ ಪರಿಗಣಿಸಬಹುದಾಗಿದೆ ಹಾಗೂ ಮಕ್ಕಳಿಗೆ ಶಾಲಾ ಬ್ಯಾಗ್‌ನ ಹೊರೆಯನ್ನು ಕಡಿತಗೊಳಿಸಬಹುದಾಗಿದೆ. (ಇದಕ್ಕಾಗಿ ಈ ಹಿಂದಿನ ವರ್ಷಗಳಲ್ಲಿ ನೀಡಿದ ವಿವಿಧ ಚಟುವಟಿಕೆಗಳ ಸುತ್ತೋಲೆಗಳನ್ನು ಮತ್ತು ಅನುಬಂಧಿಸಿದ ಚಟುವಟಿಕೆ ಬ್ಯಾಂಕ್ ಅನ್ನು ಗಮನಿಸಬಹುದಾಗಿದೆ).

*07.* **ಪುಸ್ತಕ ಪರಿಚಯ ಅವಧಿಗಳು**:- ಮಕ್ಕಳಿಗೆ ಕಡ್ಡಾಯವಾಗಿ ಶೈಕ್ಷಣಿಕ ವರ್ಷದ ಪಾಠ ಬೋಧನೆಯ ಪ್ರಾರಂಭದಲ್ಲಿ ತರಗತಿವಾರು / ವಿಷಯವಾರು ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದರೊಂದಿಗೆ ಸಿ.ಸಿ.ಇ ಚಟುವಟಿಕೆಗಳನ್ನು ಮತ್ತು ವಿವಿಧ ಪರೀಕ್ಷಾ ವಿಧಗಳನ್ನು ಹಾಗೂ ಮೌಲ್ಯಾಂಕನ ವಿಶ್ಲೇಷಣೆ ಕುರಿತು ವಾರ್ಷಿಕ ಯೋಜನೆಯನ್ನು ಪರಿಚಯಿಸುವುದರೊಂದಿಗೆ ಆತ್ಮ ವಿಶ್ವಾಸ ಮೂಡಿಸುವುದು.

*08.* **ತರಗತಿವಾರು / ವಿಷಯವಾರು ವಾರ್ಷಿಕ ಯೋಜನೆ ತಯಾರಿಕೆ**:-ಶಾಲಾ ಹಂತದಲ್ಲಿ ಶಿಕ್ಷಕರು ತಮ್ಮ ತರಗತಿವಾರು ವಿಷಯ ಬೋಧನೆಯ ಕಳೆದ ಸಾಲಿನ ಮೌಲ್ಯಾಂಕನ ವಿಶ್ಲೇಷಣೆಯನ್ನಾಧರಿಸಿ ಕಲಿಕಾ ಹಿನ್ನಡೆಗೆ ಕಾರಣಗಳನ್ನು ಪಟ್ಟಿ ಮಾಡುವುದು. ಪ್ರಸ್ತುತ ಸಾಲಿನಲ್ಲಿ ಅವುಗಳ ಸಾಧನೆಗೆ ಪರಿಹಾರ ಕಂಡುಕೊಂಡು ಯೋಜನೆ ರೂಪಿಸಿ ಪರಿಣಾಮಕಾರಿ ಅನುಪಾಲನೆ ಮಾಡುವುದು.

*09.* **ರಾಷ್ಟ್ರೀಯ / ನಾಡ ಹಬ್ಬ**:-ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ, ಡಾ ॥ ಬಿ.ಆರ್. ಅಂಬೇಡ್ಕರ್ ಜಯಂತಿ, ನಾಡ ಹಬ್ಬವಾದ ಕರ್ನಾಟಕ ರಾಜ್ಯೋತ್ಸವ ಮುಂತಾದವುಗಳನ್ನು ಆಯಾ ದಿನಗಳಂದು ಶಾಲೆಗಳಲ್ಲಿ ಕಡ್ಡಾಯವಾಗಿ ಆಚರಿಸುವುದು.

***ವಿಶೇಷ ಸೂಚನೆ- ಕೋವಿಡ್-19 ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದೆ.***

20/04/2022

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ.

20/4/22

***ಇವರಿಗೆ:***

01. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
02. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಆಯಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ), ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ.
03. ರಾಜ್ಯದ ಎಲ್ಲಾ ಶಾಲಾ ಮುಖ್ಯಸ್ಥರಿಗೆ (ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ) ಮುಂದಿನ ಕ್ರಮಕ್ಕಾಗಿ,

***ಪ್ರತಿಯನ್ನು:***

01. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
02. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, 6 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
03. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
04. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ.
05. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
06. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
07. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
08. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 80 ಅಡಿ ಹೊರ ವರ್ತುಲ ರಸ್ತೆ, ಬನಶಂಕರಿ, ಬೆಂಗಳೂರು ಇವರಿಗೆ ರವಾನಿಸುತ್ತಾ ಸೂಕ್ತ ಯೋಜನೆ ರೂಪಿಸಿ ಜಿಲ್ಲೆಗಳಿಗೆ ಮಾರ್ಗದರ್ಶನ ಮಾಡಲು ತಿಳಿಸಿದೆ.



Kiran Raghupathi

## ಚಟುವಟಿಕೆ ಬ್ಯಾಂಕ್

*(ಪರಿಷ್ಕೃತ ಪಠ್ಯವಸ್ತು ಆಧಾರಿತ ಫಲಿತಾಂಶ ಮುಖಿ ಕಾರ್ಯಕ್ರಮಗಳಾಗಿದ್ದು ಪ್ರತಿ ಶನಿವಾರದಂದು ಸಂಘಟಿಸುವುದರೊಂದಿಗೆ ಬ್ಯಾಗ್ ರಹಿತ ದಿನ / ನೋ ಬ್ಯಾಗ್ ಡೇ ಅಡಿಯಲ್ಲಿ ಆಯೋಜಿಸಬಹುದಾಗಿದೆ).*

| ಕ್ರ. ಸಂ. | ಚಟುವಟಿಕೆ ಬ್ಯಾಂಕ್ ವಿವರ |
|---|---|
| 01. | ತೆರೆದ ಪುಸ್ತಕ ಪರೀಕ್ಷೆ. |
| 02. | ಅನಿರೀಕ್ಷಿತ ಪರೀಕ್ಷೆ. |
| 03. | ಸಮಗ್ರ ರಸಪ್ರಶ್ನೆ ಕಾರ್ಯಕ್ರಮ. |
| 04. | ಪ್ರಾತ್ಯಕ್ಷಿಕೆ. |
| 05. | ಸಂವಾದ / ಹರಟೆ. |
| 06. | ಚರ್ಚಾ ಸ್ಪರ್ಧೆ. |
| 07. | ವಿಷಯವಾರು ವಸ್ತು ಪ್ರದರ್ಶನ. |
| 08. | ಕಂಠಪಾಠ ಸ್ಪರ್ಧೆ |
| 09. | ವಿಚಾರ ಸಂಕಿರಣ |
| 10. | ಮಕ್ಕಳ ಸಾಹಿತ್ಯ ಸಮ್ಮೇಳನ. |
| 11. | ಮಕ್ಕಳ ಸಂತೆ / ಮಕ್ಕಳ ಮೇಳ. |
| 12. | ಮಕ್ಕಳ ಹಬ್ಬ / ಮೇಳ. |
| 13. | ಗುಂಪು ಅಧ್ಯಯನ ಮತ್ತು ವಿಶ್ಲೇಷಣೆ. |
| 14. | ಪವಾಡ ಗುಟ್ಟು ಬಯಲು / ವಿಜ್ಞಾನ ರಂಗೋಲಿ. |
| 15. | ಸ್ಪೋಕನ್ ಇಂಗ್ಲೀಷ್ ನಿರ್ವಹಣೆ. |
| 16. | ಕಲಿಕೋತ್ಸವ. |
| 17. | ಮಕ್ಕಳ ಸಂಸತ್ತು. |
| 18. | ಚಿತ್ರಕಲೆ ಸ್ಪರ್ಧೆ / ಪ್ರಬಂಧ ಸ್ಪರ್ಧೆ. |
| 19. | ಪಾಸಿಂಗ್ ದಿ ಪಾರ್ಸೆಲ್ |
| 20. | ಮಕ್ಕಳ ಕವಿಗೋಷ್ಠಿ. |
| 21. | ಮಕ್ಕಳಿಂದ ಪ್ರಶ್ನೆಪತ್ರಿಕೆ ತಯಾರಿಕೆ, ಮೌಲ್ಯಮಾಪನ ಮತ್ತು ವಿಶ್ಲೇಷಣೆ. |
| 22. | ಕಲಿಕೆಗೆ ಪ್ರೇರಕಗಳು / ಹಿನ್ನಡೆಗಳು– ಕುರಿತ ಸಂವಾದ ಕಾರ್ಯಕ್ರಮ. |
| 23. | ಆನ್–ಲೈನ್ ಪ್ರಗತಿ ಪರಿಶೀಲನೆ. |
| 24. | ಪ್ರಾಜೆಕ್ಟ್ ವರ್ಕ್‌ಗಳ ವಿಶ್ಲೇಷಣೆ. |
| 25. | "ಗ್ರಂಥಾಲಯ / ಪ್ರಯೋಗಾಲಯದಲ್ಲಿ ಒಂದು ದಿನ" ಕಾರ್ಯಕ್ರಮ. |



Kiran Raghupathi